

# ನೇಸರು

## ಮೈಸೂರು ಅಸೋಸಿಯೇಷನ್ ಮುಂಬೈ

₹ 5/-

Nesaru **Tingalole** **Vol XXXII - 8** **August 2014**

**PAGES 16**



**ಕಾಮನ್‌ವೆಲ್ತ್ ಕ್ರೀಡಾ ಕೂಟದಲ್ಲಿ ಸ್ವರ್ಣ ಪದಕ ಗೆದ್ದ ಕನ್ನಡಿಗ ವಿಕಾಸ್ ಗೌಡ**

**The Mysore Association, Bombay**
393, Bhau Daji Road, Matunga, Mumbai - 400 019.
Tel.: 2402 4647, 2403 7065 • Fax : 2401 0574
Email : mysoreassociation.mumbai@gmail.com

# ಶ್ರೀಮತಿ ಗಾಯತ್ರಿ ಸುಂದರೇಶನ್ ಅವರಿಂದ ಭಜನಾ ಕಾರ್ಯಕ್ರಮ




ಶ್ರೀಮತಿ ಗಾಯತ್ರಿ ಸುಂದರೇಶನ್‌ರವರು ದಿನಾಂಕ ***25.07.2014*** ನೇ ಶುಕ್ರವಾರದಂದು ಅಸೋಸಿಯೇಷನ್‌ನಲ್ಲಿ 'ರಾಮ ಗೋವಿಂದ ಹರಿ' ಎಂಬ ಎಂ. ಎಸ್. ಸುಬ್ಬಲಕ್ಷ್ಮೀ ಅವರ ಭಜನೆಗಳ ಆಧಾರಿತ ಕಾರ್ಯಕ್ರಮವನ್ನು ನಡೆಸಿಕೊಟ್ಟರು. ಮೈಸೂರು ಅಸೋಸಿಯೇಷನ್‌ನ ಅಧ್ಯಕ್ಷರಾದ ವಿ. ರಾಮಭದ್ರ ಅವರು ಗಾಯತ್ರಿ ಸುಂದರೇಶನ್ ಅವರಿಗೆ ಹೂ ಗುಚ್ಛವನ್ನು ನೀಡಿ ಗೌರವಿಸಿದರು. ಲಕ್ಷ್ಮೀಯವರು ಕಾರ್ಯಕ್ರಮವನ್ನು ನಿರ್ವಹಿಸಿದರು.

## VEGETABLE PAKODA



**Ingredients**

1) Rice Flour : $^1/_2$ kg.
2) Vegetables : Carrot, Cabbage, Onion, Potato, Green Chilly.
3) Salt : 2 Spoon.
4) Turmeric Powder : 1 Spoon.
5) Red Chilly Powder : 1 Spoon.
6) Vegetable Oil : $^1/_2$ Litre.

**Recipe:**

1) Cut Vegetable in to Small Pieces.
2) Mix Rice flour, Vegetable, Tumeric powder, Salt and Red Chilly
   Powder with water to make a paste.
3) Vegetable oil was heated in Pan & fry the mixture to a consistent brown colour
4) Take out and put in on tissue paper.

## Ragi & Dry Fruit Halva



**Ingredients:**

1) Badam - $^1/_4$ kg
2) Cashew - $^1/_4$ kg
3) Ragi - 1 kg
4) Sugar - 1 kg
5) Ghee - 100 gm.
6) Milk - $^1/_2$ litre.

**Recipe :**

1) Ragi was grinded & filtered to take out the Ragi milk.
2) Badam & Cashew was Grinded.
3) Mixed above ingredients with Milk, Sugar and Ghee.
4) Mixture was rehydrated to get proper Consistency.
5) Pout it on a plate greased with ghee.
6) Cut them in to pieces once Cooled.

***- Radha .......***

ಗೌ. ಸಂಪಾದಕರು :

ಡಾ. ಜ್ಯೋತಿ ಸತೀಶ್

❖ ❖❖

ಸಂಪಾದಕ ಮಂಡಳಿ:

ಡಾ. ಮಂಜುನಾಥ್

ಕೆ. ಮಂಜುನಾಥಯ್ಯ

ನಾರಾಯಣ ನವಿಲೇಕರ್

ಗಣಪತಿ ಶಂಕರಲಿಂಗ

ನೀಲಕಂಠ ಮೇದರ್

❖ ❖❖

ಬೆಂಗಳೂರು ಪ್ರತಿನಿಧಿ :

ಎಂ.ಎ.ಎನ್. ಪ್ರಸಾದ್

❖ ❖❖

ನೇಸರುವಿನಲ್ಲಿ ಪ್ರಕಟವಾಗುವ ಬರಹಗಳಿಗೆ ಆಯಾ ಲೇಖಕರೇ ಜವಾಬ್ದಾರರು. ಅಲ್ಲಿ ಮೂಡಿ ಬಂದ ಅಭಿಪ್ರಾಯಗಳಿಗೆ ಸಂಸ್ಥೆಯು ಜವಾಬ್ದಾರಿಯಲ್ಲ. - ಸಂ

The views expressed by the contributors in this journal are theirs and not of the Association and the Association is not in anyway responsible for the same.
- Ed.

❖ ❖❖

ಸಂಪರ್ಕ ವಿಳಾಸ :

**ನೇಸರು**

ಮೈಸೂರು ಅಸೋಸಿಯೇಷನ್
393, ಭಾವು ದಾಜಿ ರಸ್ತೆ,
ಮಾಟುಂಗ,
ಮುಂಬಯಿ-400 019.
✆ 24024647 / 2403 7065
Fax : 2401 0574
Email :
mysoreassociation.mumbai@gmail.com
Website :
www.mysoreassociation.in

# ನೇಸರು
## ತಿಂಗಳೋಲೆ

ಸಂಪುಟ 31 ಆಗಸ್ಟ್ 2014 ಸಂಚಿಕೆ 8

# ಆಧುನಿಕತೆಯಲ್ಲಿ ಮಾಯವಾಯ್ತೇ ಮಾನವೀಯತೆ

### "ಏನಾದರೂ ಆಗು, ಮೊದಲು ಮಾನವನಾಗು.."

ಎಂದು ಕುವೆಂಪುರವರು ಹಾಡಿ ಕರೆಕೊಟ್ಟ ನಾಡಿದು. ಬದುಕು ಎಂಬುದು ನಮಗೆಲ್ಲರಿಗೂ ದೊರೆತ ಬೆಲೆ ಕಟ್ಟಲಾಗದ ಒಂದು ಅಮೂಲ್ಯ ಕಾಣಿಕೆ ಎಂದೇ ಹೇಳಬಹುದು. ತಾಳ್ಮೆ, ಪರೋಪಕಾರ, ಸಹಬಾಳ್ವೆ, ದಯೆ, ಕರುಣೆ ಹೀಗೆ ಮುಂತಾದ ಮೌಲ್ಯಗಳನ್ನು ನಮ್ಮ ಬದುಕಿನಲ್ಲಿ ರೂಢಿಸಿಕೊಳ್ಳುವುದರ ಮೂಲಕ ನಮ್ಮ ಜೀವನವನ್ನು ಸಾರ್ಥಕ ಪಡಿಸಿಕೊಳ್ಳಬೇಕು. ಇಂದು ಮನುಷ್ಯ ಮನುಷ್ಯರ ನಡುವೆ ಸೇತುವೆಯಾಗಬೇಕಿದ್ದ ಧರ್ಮ ಅವರ ನಡುವಿನ ಬಹುದೊಡ್ಡ ತಡೆಗೋಡೆಯಾಗಿ ನಿಂತಿರುವುದು ವಿಪರ್ಯಾಸವೇ ಸರಿ. ಯಾವುದೇ ಧರ್ಮವು ಹಿಂಸೆ, ಅಸೂಯೆ, ಜಗಳ ಮುಂತಾದ ಋಣಾತ್ಮಕ ಅಂಶಗಳನ್ನು ಪ್ರತಿಪಾದಿಸುತ್ತಿಲ್ಲ. ನಮಗೆ ಇಂದು ಬೇಕಾಗಿರೋದು ಮನುಷ್ಯ ಧರ್ಮ. ಮನುಷ್ಯ–ಮನುಷ್ಯರ ನಡುವಿನ ಸಾಮಾಜಿಕ ಸಂಬಂಧಗಳಲ್ಲಿ ಬಿರುಕು ಮೂಡಿಸುವ ಈ ಧರ್ಮಗಳಿಗಿಂತ ಮಾನವೀಯತೆಯನ್ನೇ ತಳಹದಿಯನ್ನಾಗಿ ಪಡೆದಿರುವ ಮನುಷ್ಯ ಧರ್ಮವೇ ಶ್ರೇಷ್ಠವಾದುದು.

ಮನುಷ್ಯರಲ್ಲಿ ಮಾನವೀಯತೆ ಬಹಳ ಮುಖ್ಯವಾಗಿ ಬೇಕು. ಎಲ್ಲ ಜೀವರಾಶಿಗಳಲ್ಲಿ ಮನುಷ್ಯನಿಗೆ ಮಾತ್ರ ಸರಿ ತಪ್ಪು ಅರ್ಥಮಾಡಿಕೊಳ್ಳುವ ವಿವೇಚನಾ ಶಕ್ತಿ ಇರೋದು. ಮಾನವರಾಗಿರುವ ನಾವು ಮಾನವೀಯತೆ ರೂಢಿಸಿಕೊಳ್ಳಬೇಕಾಗಿದೆ. ಇಂದು ಆಧುನಿಕತೆಯತ್ತ ನಾವೆಲ್ಲರೂ ದಾಪುಗಾಲಿಡುತ್ತಿದ್ದೇವೆ. ನಮ್ಮ ದೇಶ ತಂತ್ರಜ್ಞಾನದಲ್ಲಿ ಇಷ್ಟೊಂದು ಪ್ರಗತಿ ಸಾಧಿಸಿದ್ದೇವೆ ಎಂದು ಅಂಕೆ ಸಂಖ್ಯೆಗಳ ದಾಖಲೆಗಳನ್ನು ನೀಡುತ್ತಿದ್ದೇವೆ. ಆದರೆ ಮಾಯವೀಯತೆಯನ್ನು ಹಿಂದೆ ಸರಿಸುತ್ತಿದ್ದೇವೆ ಯಾರಿಗೂ ತಿಳಿಯಲೇ ಇಲ್ಲ. ಎಲ್ಲೆಂದರಲ್ಲಿ ಕೊಲೆ, ಅತ್ಯಾಚಾರ, ದರೋಡೆ ನಡೆಯುತ್ತಿದೆ. ನಾಳೆ ಅರಳಬೇಕಾಗಿದ್ದ ಹೂವನ್ನು ಇವತ್ತೇ ತಮ್ಮ ಹುಚ್ಚು ಬಯಕೆಯ ಈಡೇರಿಕೆಗಾಗಿ ಹೊಸಕಿ ಹಾಕುತ್ತಿದ್ದಾರೆ. ಇದ್ಯಾವ ನ್ಯಾಯ. ತಮ್ಮ ಮನೆಯ ಮಕ್ಕಳು ಸುರಕ್ಷಿತರಾಗಿರಬೇಕು. ಇನ್ನೊಬ್ಬರ ಮನೆಯ ಹೆಣ್ಣುಮಕ್ಕಳು ಏನಾದರೇನು ಎನ್ನುವ ಅಸಡ್ಡೆ ಎಲ್ಲ ಕಡೆ ತಾಂಡವಾಡುತ್ತಿದೆ. ಇದೇನಾ ಮಾನವೀಯತೆ? ಹೆಣ್ಣನ್ನು ದೇವತೆಯ ಸ್ಥಾನದಲ್ಲಿಟ್ಟು ಪೂಜಿಸುವ ನಾಡಿದು. ಅಂತಹ ಹೆಣ್ಣುಮಕ್ಕಳಿಗೆ ಸುರಕ್ಷತೆ ಇಲ್ಲ ಇಲ್ಲಿ. ಇಂತಹ ಪ್ರಸಂಗಗಳನ್ನು ಬರಿ ಟಿವಿ ಪೇಪರ್‌ನಲ್ಲಿ ನೋಡಿದಾಕ್ಷಣ 'ಅಯ್ಯೋ' ಛೇ.. ಹೀಗಾಗಬಾರದಿತ್ತು ಎಂದಾಕ್ಷಣ ನಮ್ಮ ಕರ್ತವ್ಯ ಮುಗಿಯಲಿಲ್ಲ. ನಾಳೆ ಅದೇ ನೋವಿನ ಸರದಿ ನಮ್ಮ ಪಾಲಿಗೆ ಬಂದಾಗ ಆ ನೋವಿನ ನಿಜಾರ್ಥ ನಮ್ಮ ಅರಿವಿಗೆ ಬರುತ್ತದೆ. ಇದೆಲ್ಲ ಈಗ ಸರ್ವೇ ಸಾಮಾನ್ಯ ಎಂದು ಕೈಕಟ್ಟಿ ಕುಳಿತರೆ ನಡೆಯುವುದಿಲ್ಲ. ಇದಕ್ಕೊಂದು ಶಾಶ್ವತವಾದ ಪರಿಹಾರವನ್ನು ಹುಡುಕಬೇಕಾಗಿದೆ. ಆ ಕಲ್ಲು ಮನಸ್ಸುಗಳು ಎನ್ನುವುದಕ್ಕಿಂತ, ವಿಕೃತ ಹೃದಯಗಳ ಮನೋಸ್ಥಿತಿ ಬದಲಾಗಬೇಕಿದೆ. ಮಾನವೀಯತೆಯ ನೆಲಗಟ್ಟು ನಿಜಾರ್ಥದಲ್ಲಿ ಅವರ ಮನಸ್ಸಿನಲ್ಲಿ ನೆಲೆಯೂರಬೇಕಾಗಿದೆ.

ಎಲ್ಲ ಧರ್ಮದ ಸಾರವೇ ಮಾನವೀಯತೆ. ಅದನ್ನು ಬಿಟ್ಟು ಮತ್ತೆಲ್ಲವನ್ನು ನಾವು ಪಾಲಿಸಿಕೊಂಡು ಬರುತ್ತಿದ್ದೇವೆ. ಶ್ರಮಿಕರಿಗೆ ಬೆಲೆ ಇರಲಿ, ಬಡವರ ಬಗ್ಗೆ ಕಾಳಜಿ ಇರಲಿ.. ದುಡ್ಡು ಮಾಡೋದು ಒಂದೇ ಜೀವನವಲ್ಲ. ದುಡ್ಡಿಗಿಂತಲೂ ದೊಡ್ಡದಾದದ್ದು ಮಾನವೀಯತೆ. ಸಹಾಯ ಮಾಡದ ಮನುಷ್ಯ ಬದುಕಿದ್ದೂ ಸತ್ತಂತೆ, ವ್ಯರ್ಥ ಜೀವನ ಸಾಗಿಸೋ ಬದಲು ಬದುಕಿರುವಾಗ ನಾಲ್ಕು ಜನರಿಗೆ ಸಹಾಯ ಮಾಡಿದ್ರೆ ನಾವು ಸತ್ತಿದ್ದರೂ ಬದುಕಿದ್ದಂತೆ.

ಇವತ್ತಿನ ಮಕ್ಕಳಿಗೆ ಬೇಕಾಗಿರೋದು ಲ್ಯಾಪ್‌ಟಾಪ್ ಅಲ್ಲ. ಮಕ್ಕಳಿಗೆ ಬೇಕಾಗಿರೋದು ಜೀವನ ಮೌಲ್ಯದ ಪಾಠ. ಈ ಸಂದರ್ಭದಲ್ಲಿ ನನಗೆ ಒಂದು ಕತೆ ನೆನಪಾಗುತ್ತದೆ... ಒಂದು ದಿನ ಶಾಲೆಯಲ್ಲಿ ಶಿಕ್ಷಕರು ಮಕ್ಕಳಿಗೆ ಭೂಪಟದ ಚಿತ್ರವನ್ನು ನೀಡಿ ಇದರಲ್ಲಿ ಹಿಂದೂಸ್ಥಾನದ ಭಾಗವನ್ನು ಚಿತ್ರಿಸಿ ಅಂದರಂತೆ, ಒಂದು ಹುಡುಗನನ್ನು ಬಿಟ್ಟು ಮತ್ತೆ ಎಲ್ಲ ಮಕ್ಕಳು ಹಿಂದೂಸ್ಥಾನದ ಭೂಪಟವನ್ನು ಚಿತ್ರಿಸುವುದರಲ್ಲಿ ವಿಫಲರಾದರಂತೆ. ಒಬ್ಬನೇ ಒಬ್ಬ ಹುಡುಗ ಹಿಂದೂಸ್ಥಾನದ ಚಿತ್ರವನ್ನು ಚಿತ್ರಿಸಿ ಶಿಕ್ಷಕರಿಗೆ ತಂದು ತೋರಿಸಿದನಂತೆ. ಆಗ ಶಿಕ್ಷಕರು ಇದು ನಿನ್ನಿಂದ ಹೇಗೆ ಸಾಧ್ಯವಾಯಿತು ಎಂದು ಕೇಳಿದರಂತೆ ಆ ಹುಡುಗನಲ್ಲಿ. ಆಗ ಆ ಹುಡುಗ ಅಂದನಂತೆ ಏನಿಲ್ಲ ಟೀಚರ್ ಭೂಪಟದ ಹಿಂದೆ ಒಂದು ಮನುಷ್ಯನ ಆಕಾರವಿದೆ. ನಾನು ಆ ಮನುಷ್ಯನನ್ನು ಜೋಡಿಸುತ್ತ ಹೋದಂತೆ ಹಿಂದೂಸ್ಥಾನದ ಭೂಪಟ ಸಿದ್ಧವಾಯಿತು ಅಂದನಂತೆ. ಅಂದರೆ ಮನುಷ್ಯ – ಮನುಷ್ಯನನ್ನು ಜೋಡಿಸುವ ಕಾರ್ಯ ನಡೆಯಬೇಕಾಗಿದೆ ಹೊರತು ಒಡೆಯುವುದಲ್ಲ.

ನಮ್ಮ ನೆರೆಯವರನ್ನು ನಮ್ಮವರಂತೆಯೇ ಪ್ರೀತಿಸಬೇಕು. ಪ್ರತಿಯೊಬ್ಬರ ನೋವಿನಲ್ಲೂ ನಾವು ಭಾಗಿಗಳಾಗಬೇಕು. ಇವತ್ತು ನಾವು ನೀಡಿದ ಸಹಾಯಹಸ್ತ ನಾಳೆ ನಮಗೆ ಅಭಯಹಸ್ತವಾಗುತ್ತದೆ. ಅಮೇರಿಕಾದ ಅಧ್ಯಕ್ಷ ರೋನಾಲ್ಡ್ ರೇಗಾನ್ ಅವರು ಇಂಗ್ಲೀಷಿನಲ್ಲಿ ಒಂದು ಮಾತನ್ನು ಹೇಳುತ್ತಾರೆ **"We can't help everyone, but everyone can help someone"**. ಎಷ್ಟೊಂದು ಅರ್ಥಪೂರ್ಣವಾದುದು ಈ ಮಾತು. ಹಾಗೆಯೇ ಕುವೆಂಪುರವರ ವಿಶ್ವಮಾನವ ಸಂದೇಶ ನಮ್ಮೆಲ್ಲರ ಬಾಳಿನ ಗುರಿಯಾಗಬೇಕು.

**ಡಾ. ಜ್ಯೋತಿ ಸತೀಶ್**

# ಸ್ವತಂತ್ರ ಭಾರತದಲ್ಲಿ ನಾವೆಷ್ಟು ಸ್ವತಂತ್ರರು...?

✍ ಡಾ. ಜ್ಯೋತಿ ಸತೀಶ್

ಮೊದ ಮೊದಲು ರಾಜ ಮಹಾರಾಜರ ಆಳ್ವಿಕೆಯಲ್ಲಿ ಒಳಪಟ್ಟಿದ್ದ ಭಾರತ ದೇಶವು ಆನಂತರ ಸುಮಾರು 200 ವರುಷಗಳ ಕಾಲ ಬ್ರಿಟಿಷರ ದಬ್ಬಾಳಿಕೆಗೆ ತಲೆಬಾಗಿ ಅವರ ಗುಲಾಮರಾಗುವಂತೆ ಮಾಡಿತು. ಸಂಪದ್ಭರಿತವಾಗಿದ್ದ ನಮ್ಮ ಸುಂದರ ಭಾರತ ದೇಶವನ್ನು 200 ವರ್ಷ ಆಡಳಿತ ನಡೆಸಿ ಸಂಪೂರ್ಣವಾಗಿ ದೋಚಿ ಕೊನೆಗೆ 1947ನೇ ಆಗಸ್ಟ್ 14ರ ಮಧ್ಯರಾತ್ರಿಯಂದು ನಾವು ಸ್ವತಂತ್ರರಾದೆವು. ಭಾರತ ದೇಶದ ಸ್ವಾತಂತ್ರ್ಯಕ್ಕಾಗಿ ಹಲವಾರು ಮಹನೀಯರು ಪಣತೊಟ್ಟಿದ್ದಾರೆ. ಸತ್ಯ ಶಾಂತಿ ತ್ಯಾಗಮೂರ್ತಿಯಾಗಿದ್ದ ಮಹಾತ್ಮ ಗಾಂಧೀಜಿಯವರೊಡನೆ ಇನ್ನೂ ಹಲವಾರು ರಾಷ್ಟ್ರೀಯ ನಾಯಕರು ಸ್ವಾತಂತ್ರ್ಯಕ್ಕಾಗಿ ಹೋರಾಡಿದ್ದಾರೆ. ಇಂದು ನಾವಿಲ್ಲಿ ಸುಖಮಯ ಜೀವನ ನಡೆಸುತ್ತೇವೆಯಾದರೆ ಅವರನ್ನೆಲ್ಲ ನಾವು ಸ್ಮರಿಸಲೇಬೇಕು.

ಇಂದು ಭಾರತಕ್ಕೆ ಸ್ವಾತಂತ್ರ್ಯ ಬಂದು 67ವರ್ಷ ತುಂಬುತ್ತದೆ. ಈ 67ವರ್ಷದಲ್ಲಿ ಪ್ರಜಾಪ್ರಭುತ್ವ ಭಾರತ ದೇಶದಲ್ಲಿ ನಾವು ಸಾಧಿಸಿದ ಪ್ರಗತಿಯನ್ನೊಮ್ಮೆ ಸಿಂಹಾವಲೋಕನ ಮಾಡಿ ನೋಡಿದರೆ ಯಾವ ಘನಕಾರ್ಯವನ್ನು ಮಾಡಿದಂತೆ ತೋರುವುದಿಲ್ಲ. ಮಹಾನಗರಗಳಲ್ಲಿ ದಿನಬೆಳಗಾದರೆ ಹೊಟ್ಟೆಪಾಡಿಗಾಗಿ ಮನೆಬಿಟ್ಟು ತೆರಳಿದ ವ್ಯಕ್ತಿ ಸಂಜೆ ಸುರಕ್ಷಿತವಾಗಿ ಮನೆ ತಲುಪುವನೆಂಬ ಭರವಸೆ ಇಲ್ಲ. ಯಾಕೆಂದರೆ ಎಲ್ಲೆಂದರಲ್ಲಿ ದೀಪಾವಳಿಯ ಪಟಾಕಿಯಂತೆ ಯಾವಾಗ ಬಾಂಬು ಸ್ಫೋಟಗೊಳ್ಳುತ್ತದೆ ಎಂದು ಅಮಾಯಕನಿಗೆ ಹೇಗೆ ತಿಳಿದಿರುತ್ತದೆ. ಹೀಗೆಯೇ ಹಲವಾರು ರೀತಿಯಲ್ಲಿ ಇಂದು ಭಾರತದೇಶವು ಅಪರಾಧಿ ಸ್ಥಾನದಲ್ಲಿ ನಿಂತ ಹಾಗೆ ಕಂಡು ಬರುತ್ತದೆ. ಇಂದು ಭಾರತದೇಶವು ಸ್ವತಂತ್ರ ಗಿಟ್ಟಿಸಿಕೊಂಡು 66 ವರ್ಷ ತುಂಬಿದೆ. ಆದರೆ ಇಲ್ಲಿ ದಿನನಿತ್ಯ ನಡೆಯುತ್ತಿರುವ ಭ್ರಷ್ಟಾಚಾರ, ಅನ್ಯಾಯ, ಭಯೋತ್ಪಾದನೆಗಳನ್ನೆಲ್ಲ ಕಂಡಾಗ ಈ ದೇಶದಲ್ಲಿ ನಾವೆಷ್ಟು ಸ್ವತಂತ್ರರು ಎಂದು ನಮಗನಿಸುತ್ತದೆ.

**"In this might, while the whole world is sleeping. India is awake in the light of Freedom"** ಈ ಮಾತನ್ನು ಭಾರತದ ಪ್ರಥಮ ಪ್ರಧಾನಿ ನೆಹರೂರವರು 1947ನೇ ಆಗಸ್ಟ್ 14ರ ಮಧ್ಯರಾತ್ರಿಯಂದು ದೆಹಲಿಯ ಕೆಂಪುಕೋಟೆಯಿಂದ ದೇಶವಾಸಿಗಳಿಗೆ ಸ್ವತಂತ್ರ ಭಾರತದ ಉದಯದ ಘೋಷಣೆ ಮಾಡುತ್ತಾ ನುಡಿದಿದ್ದರು. ಅದುವರೆಗೆ ನಾವು ಎಚ್ಚರವಾಗೇ ಇದ್ದೆವು. ಆವರೆಗೆ ಭಾರತದ ಮೇಲೆ ಆಕ್ರಮಣಗೈದ ಚೀನ, ಹೂಣ, ಖಿಲ್ಜ, ಪೋರ್ಚುಗೀಸ್, ಡಚ್ಚ, ತುರ್ಕ, ಬ್ರಿಟಿಷರ ಪ್ರತ್ಯಕ್ಷ ಪರೋಕ್ಷ ಸಮರದ ವಿರುದ್ಧ ಹೋರಾಟ ಕೈಗೊಂಡಿದ್ದ ನಾವು ಆಗಸ್ಟ್ 15ರಿಂದ ನಿದ್ರಿಸಲಾರಂಭಿಸಿದೆವು. ಭಾರತದ ಇತಿಹಾಸ ಸುಮಾರು 5000 ವರ್ಷಗಳಿಗಿಂತಲೂ ಹಳೆಯದಾಗಿದ್ದು, ನಮ್ಮವರು ಈ ಸಮೃದ್ಧ ವಿಶಾಲ ಇತಿಹಾಸದ ವಾರಸುದಾರರಾಗಿದ್ದರಿಂದಲೇ ರಾಮಕೃಷ್ಣ, ವಿವೇಕಾನಂದ, ವಿದ್ಯಾರಣ್ಯ, ರಾಮದಾಸರಂತಹ ಮಹಾನ್ ವ್ಯಕ್ತಿಗಳು ಇಲ್ಲಿ ಜನ್ಮವೆತ್ತಿ ಈ ನಾಡಿನ ಹಿರಿಮೆ ಗರಿಮೆಗಳನ್ನು ಪ್ರಚುರಪಡಿಸಿ ನಮ್ಮನ್ನು ಜಾಗೃತರನ್ನಾಗಿಸಿದ್ದರು. ಹಾಗಿದ್ದರೂ ಸ್ವಾತಂತ್ರ್ಯನಂತರ ದೇಶ ಮೈ ಮರೆತಿರುವುದೇಕೆ? ಇದು ನಮ್ಮ ಮುಂದಿರುವ ಸವಾಲು.

ಸ್ವಾತಂತ್ರ್ಯನಂತರ ಭಾರತವು ಅಭಿವೃದ್ಧಿಯ ಹಣತೆ ಕಂಡುದದಕ್ಕಿಂತ ಹೆಚ್ಚು ಹಗರಣಗಳನ್ನು ಕಂಡಿತು. ಮೆನನ್ ರೋಮೇಶ್, ಗಾಭ್ಲಿ ಸತೀಶ್ ಶರ್ಮ ಮೇಹ್ತಾ ಪಾರೀಖ್, ಸುಖರಾಮ್, ಭೋಪೋರ್ಸ್, ಸೈಂಟ್‌ಕಿಟ್ಸ್ ಲಖೂಭಾಯಿ, ತೀನ್‌ಬಿಘಾ, ಟೆಲಿಕಾಂ, ತೇಲ್ಗಿ, 2ಜಿ ಸ್ಪೆಕ್ಟ್ರಂ.... ಪ್ರಾಯಶಃ ಬ್ರಿಟಿಷರ ದಬ್ಬಾಳಿಕೆಯ ವಿರುದ್ಧ ಹೋರಾಡಿದವರಿಗಿಂತ ಅಧಿಕ ಪ್ರಮಾಣದಲ್ಲಿ ಹಗರಣಗಳ ರೂವಾರಿಗಳಿದ್ದಾರೆ ಮತ್ತು ಇಂತಹ ಹಗರಣದಲ್ಲಿ ಯಾವೊಂದು ಹಗರಣವು ಕೂಡ ಕೂಲಂಕಷವಾಗಿ ತನಿಖೆಯಾಗಿ, ತಪ್ಪಿತಸ್ಥರಿಗೆ ಸರಿಯಾದ ಶಿಕ್ಷೆಯಾಗಿಲ್ಲವೆಂಬುದು ವಿಷಾದದ ಸಂಗತಿಯಾಗಿದೆ. ಎಲ್ಲ ಹಗರಣವು ಒಂದು ಸಲ ಬಿಸಿ ಬಿಸಿ ಸುದ್ಧಿಯಾಗಿ ಮತ್ತೆ ಹೇಳ ಹೆಸರಿಲ್ಲದೆ ಮಾಯವಾಗುತ್ತಿದೆ. ಇದು ನಮ್ಮ ದೇಶದ ನ್ಯಾಯಾಂಗ ವ್ಯವಸ್ಥೆ. ಸುಂದರದೇಶದ ನಿರ್ಮಾಣಕ್ಕಾಗಿ ಸಮರ್ಥ ಇತಿಹಾಸ ಪ್ರಜ್ಞೆಯ ಅವಶ್ಯಕತೆಯಿದೆ. ಆದರೆ ನಮಗೊಂದು ಇತಿಹಾಸವಿದೆಯಂತನೇ ನಮ್ಮಲ್ಲಿ ಕೆಲವರಿಗೆ ತಿಳಿದಿಲ್ಲ. ಹರಪ್ಪದಿಂದ ಹಂಪೆ, ಭಗತ್ – ಭೋಸ್–ಸಾರ್ವಕರ್ – ಧೀಂಗ್ರಾ – ಜಲಿಯನ್ ವಾಲಾಬಾಗ್ ಘಟನೆ ನಮ್ಮಲ್ಲಿ ಇನ್ನೂ ಕೆಲವರಿಗೆ ತಿಳಿದಿಲ್ಲ. ಸ್ವಾತಂತ್ರ್ಯನಂತರ ಒಬ್ಬನೇ ಒಬ್ಬ ಸರಿಯಾದ ನಾಯಕ ಈ ದೇಶಕ್ಕೆ ಒದಗದಿರುವುದು ನಮ್ಮ ದೌರ್ಭಾಗ್ಯವೇ ಸರಿ. ಅಡಾಲ್ಫ್ ಹಿಟ್ಲರ್ ಜರ್ಮನಿಯನ್ನು ಮಾತೆಯೊಬ್ಬಳು ತನ್ನ ಬಿದ್ದ ಮಗುವನ್ನು ಯಾವ ರೀತಿ ಮೇಲಕ್ಕೆ ಎತ್ತುತ್ತಾಳೋ, ಅದೇ ರೀತಿ ಮೇಲಕ್ಕೆತ್ತಿದ. ಇದಕ್ಕೆ ಕಾರಣ ಆತನಲ್ಲಿದ್ದ ಛಲ, ಸ್ವಾಭಿಮಾನ ಮತ್ತು ದೇಶಾಭಿಮಾನ. ನಾವು ಸುಮಾರು 105 ಕೋಟಿಗಿಂತಲೂ ಹೆಚ್ಚು ಜನರು ಕಳೆದ 65 ವರ್ಷಗಳಲ್ಲಿ ಸಾಧಿಸಲಾರದ್ದನ್ನು ಆತ ಕೆಲವೇ ವರ್ಷಗಳಲ್ಲಿ ಪೂರೈಸಿದ್ದ. ಇನ್ನು ಇತರ ರಾಷ್ಟ್ರಗಳತ್ತ ಕಣ್ಣು ಹಾಯಿಸಿದರೆ ತಮ್ಮ ಮಾತೃಭೂಮಿಯಿಂದಲೇ ಹೊರದಬ್ಬಲ್ಪಟ್ಟು ಅವಿರತ ಹೋರಾಟದ ಮುಖೇನ ಇಸ್ರೇಲನ್ನು ನಿರ್ಮಿಸಿದ್ದನ್ನು ಇಲ್ಲಿ ಸ್ಮರಿಸಬಹುದು. 1945ರ ಜಾಗತಿಕ ಮಹಾಸಮರವು ಜಪಾನಿನ ತಲೆಮೆಟ್ಟಿ ನಿಂತತ್ತು. ಆದರೆ ಇಂದು ಅದೊಂದು ಬಲಾಢ್ಯ ದೇಶ. ಸುತ್ತಮುತ್ತಲೂ ಲೆಬನಾನ್, ಪ್ಯಾಲೆಸ್ತೇನ್‌ನಂತಹ ಕಟ್ಟಾ ವೈರಿಗಳನ್ನೇ ಹೊಂದಿರುವ, ಸರಿಯಾಗಿ ಒಂದು ರಾಜ್ಯದಷ್ಟು ವಿಸ್ತಾರತೆಯನ್ನು ಹೊಂದಿರದ ಇಸ್ರೇಲಿಗೆ ಅಮೇರಿಕಾ ಸಲಾಮು ಹೊಡೆಯುತ್ತದೆ. ಇಡೀ ಅಮೇರಿಕಾದ ಅರ್ಥವ್ಯವಸ್ಥೆಯನ್ನು ಇಸ್ರೇಲಿಯನ್ನರು ಹತೋಟಿಯಲ್ಲಿಟ್ಟಿರುವುದೇ ಇದಕ್ಕೆ ಕಾರಣ.

ಭಾರತ ದೇಶವನ್ನು ತುಂಡು ಮಾಡುವ ಹುನ್ನಾರದ ಜಿನ್ನಾನ ಮನವೊಲಿಸಲು ನೆಹರೂ, ಪಟೇಲ್, ಗಾಂಧೀಜಿಯಂತಹ ಮಹಾನ್ ವ್ಯಕ್ತಿಗಳಿಂದ ಅಷ್ಟೇ ಏಕೆ ಈ ದೇಶದ ಒಬ್ಬನೇ ಒಬ್ಬ ಪ್ರಜೆಯಿಂದ ಯಾವಾಗ ಸಾಧ್ಯವಾಗಲಿಲ್ಲವೋ ಆಗಲೇ ನಾವು ಸೋತೆವು. ಭಾರತದೇಶದಲ್ಲಿರುವ ಎಲ್ಲ ಜನರು ತಮ್ಮ ಧರ್ಮವನ್ನು ಆಚರಿಸಲು ಮತ್ತು ತಮ್ಮ ನಂಬಿಕೆಗಳನ್ನು ಪ್ರತಿಪಾದಿಸಲು ಮುಕ್ತವಾದ ದೇಶ ಇದಾಗಬೇಕೆಂಬ ದೂರದರ್ಶಿತ್ವವನ್ನು ಮಹಾತ್ಮ ಗಾಂಧೀಜಿಯವರು ಹೊಂದಿದ್ದರು. ಗಾಂಧೀಜಿಯವರ ರಾಮರಾಜ್ಯದ ಕನಸನ್ನು ನನಸಾಗಿಸುವುದು ಇಂದಿನ ಯುವಜನರ ಕೈಲಿದೆ. ಆದರೆ ಇಂದಿನ ಯುವಜನರಲ್ಲಿ ಕೆಲವರು ಕ್ಲಬ್ ಪಬ್ ಬಾರ್‌ಗಳೇ ಈ ದೇಶದ ಅಭಿವೃದ್ಧಿಯ ಅಧುನಿಕ ದೇಗುಲಗಳೆಂದು ತಿಳಿದಿದ್ದಾರೆ. ಆದ್ದರಿಂದ ನಮ್ಮ ಕೆಲವು ಮಾಧ್ಯಮಗಳು, ದಿನಬೆಳಕಾದರೆ ಸಿನಿಮಾಲೋಕದ ಕೆಟ್ಟ ಸುದ್ದಿಗಳನ್ನು ಕೊಟ್ಟು ಯುವ ಜನಾಂಗವನ್ನು ದಾರಿತಪ್ಪಿಸುವಂತೆ ಮಾಡುವ ಇನ್ನೂ ಕೆಲವು ಮಾಧ್ಯಮಗಳು ಯುವಜನರನ್ನು ಇನ್ನು ಯಾವ ಚಿಂತನೆಗೆ ಒರೆ ಹಚ್ಚೀತು?

ಕಳೆದ 65 ವರ್ಷಗಳಲ್ಲಿ ಭಾರತ ದೇಶದ ಆಡಳಿತ ಪ್ರಜೆಗಳಿಗೆ ನಿರಾಸೆ ತಂದಿದೆ. ದೇಶದ ರಾಜಕಾರಣಿಗಳು ಸ್ವಿಸ್ ಬ್ಯಾಂಕ್‌ನಲ್ಲಿ ಕೂಡಿಟ್ಟ ಕಪ್ಪು ಹಣದೇಶದಲ್ಲಿನ ಕಳ್ಳನೋಟುಗಳ ಮೌಲ್ಯ 200 ಸಾವಿರ ಕೋಟಿ ರೂಪಾಯಿ ಆದರೆ ಪತ್ತೆಯಾಗಿರುವುದು ಶೇಕಡ ಒಂದಕ್ಕಿಂತ ಕಡಿಮೆ. ಖೋಟಾ ಸ್ಟಾಂಪ್ ಪೇಪರ್ ವಂಚನೆಯ ಮೌಲ್ಯ, ರಾಷ್ಟ್ರೀಕೃತ ಬ್ಯಾಂಕ್‌ಗಳು ಮನ್ನಾ ಮಾಡಿರುವ ಸಾಲದ ಮೊತ್ತ ತೆರಿಗೆ ಬಾಕಿ ಮೊತ್ತ ದೇಶದ ವಿದ್ಯುತ್ ಕಳ್ಳಸಾಗಣೆಯ ಮೌಲ್ಯ, ಇದೆಲ್ಲವನ್ನು ಒಟ್ಟುಗೂಡಿಸಿದರೆ ಅಂದಾಜು ಸುಮಾರು 1,50,000 ಕೋಟಿಗಳಷ್ಟು ಆಗುತ್ತದೆ. ದೇಶದ ಪ್ರತಿಯೊಂದು ಕ್ಷೇತ್ರವೂ ಇದಕ್ಕೆ ಹೊರತಾಗಿಲ್ಲ. ಸತ್ಯಕ್ಕಾಗಿ ಸರ್ವಸ್ವವನ್ನೂ ತ್ಯಾಗ ಮಾಡಿದ ಹರಿಶ್ಚಂದ್ರ, ಪರಹಿತಕ್ಕಾಗಿ ತನ್ನ ದೇಹ ತ್ಯಾಗ ಮಾಡಿದ ದಧೀಚಿಯಂತಹವರು ಹುಟ್ಟಿದ ನಾಡಿನಲ್ಲಿ ರಾಜಕಾರಣ ಎಂಬ ರಾಕ್ಷಸ ಜನ್ಮತಾಳಿತೆಂಬಂತೆ ತೋರುತ್ತಿದೆ. ರಾಜಕಾರಣಕ್ಕೆ ಗುಪ್ತರ ಕಾಲದಲ್ಲಿಉನ್ನತ ಮೌಲ್ಯ ತಂದಿತ್ತ ಚಾಣಾಕ್ಯನಂತಹವರು ಆಧುನಿಕ ರಾಜಕಾರಣಕ್ಕೆ ಕಪಟೆಯಂತೆ ಕಂಡರು. ಅಯೋಧ್ಯೆಯಲ್ಲಿ ನಡೆದ ಬಾಬರಿ ಮಸೀದಿ ವಿವಾದವು ಎಂದಿಗೂ ಹಿಂದುಗಳು ಮತ್ತು ಮುಸ್ಲಿಮರ ನಡುವೆ ಸಂಗರ್ಷವಾಗಿರಲಿಲ್ಲ. ಆದರೆ ಭಾರತದ ಹಿಂದುತ್ವ ಹಾಗೂ ಜಾತ್ಯಾತೀತ ದೃಷ್ಟಿಕೋನಗಳ ನಡುವಣ ಹೋರಾಟವಾಗಿತ್ತು.

ಭಾರತ ದೇಶಕ್ಕೆ ಸ್ವಾತಂತ್ರ ನೀಡುವ ಸಮಯದಲ್ಲಿ ಸರ್ ವಿನ್ಸೆಂಟ್ ಚರ್ಚಿಲ್ಲರು ಈ ರೀತಿ ಹೇಳಿಕೆಯನ್ನು ನೀಡಿದ್ದರು. "ಭಾರತಕ್ಕೆ ಸ್ವಾತಂತ್ರ್ಯವನ್ನು ಅರ್ಧ ರಾತ್ರಿಯಲ್ಲೆ ಕೊಡಿ, ಯಾಕೆಂದರೆ ಅವರು ಹಗಲಿನಲ್ಲೂ ನಿದ್ರಿಸುತ್ತಿರುತ್ತಾರೆ", "ಭಾರತೀಯರು ಬೇರೆಯುವರಿಂದ ಆಳಲ್ಪಡಲು ಯೋಗ್ಯರೇ ವಿನಃ ಆಳಿಕೊಳ್ಳಲು ಅಲ್ಲ", "ಸ್ವಾತಂತ್ರ್ಯ ನಂತರ ಆಳುವವರು ಭಾರತೀಯರು ಉಸಿರಾಡುವ ಗಾಳಿಗೂ ತೆರಿಗೆ ಹಾಕುತ್ತಾರೆ" ಚರ್ಚಿಲ್ಲರ ಮೇಲಿನ ಮೂರು ಹೇಳಿಕೆಗಳನ್ನು ನಮ್ಮ ಇಂದಿನ ಆಡಳಿತ ವ್ಯವಸ್ಥೆಗೆ ಹೋಲಿಸಿದರೆ ಸತ್ಯಾಂಶವಿರುವುದು ಕಂಡುಬರುತ್ತದೆ. ಇಡೀ ಮುಂಬೈ ಮಹಾನಗರವನ್ನೇ ತಲ್ಲಣಗೊಳಿಸಿದ, ನೂರಾರು ಜನರ ಮಾರಣ ಹೋಮಕ್ಕೆ ಕಾರಣಿಕರ್ತನಾದ ಉಗ್ರ ಪಾಕಿಸ್ತಾನಿ ಪ್ರಜೆ ಕಸಬ್ ನಮ್ಮ ದೇಶದಲ್ಲಿ ಎಷ್ಟು ಸುರಕ್ಷಿತನಾಗಿದ್ದ ನೋಡಿ. ಅವನಿಗೆ ಸರಿಯಾದ ಶಿಕ್ಷೆ ದೊರೆತಿದೆ. ಅವನನ್ನು ನೇಣುಗಂಬಕ್ಕೆ ಏರಿಸುವವರೆಗೂ ಅವನ ರಕ್ಷಣೆಗಾಗಿ ಕೋಟಿಗಟ್ಟಲೆ ಖರ್ಚುಮಾಡಲಾಗಿದೆ. ಆದರೆ ಇಲ್ಲೇ ಹುಟ್ಟಿ ಬೆಳೆದ ನಾವು ಕಸಬ್‌ನಷ್ಟು ಸುರಕ್ಷಿತವಾಗಿದ್ದೇವೆಯೇ ಎಂಬುದು ನಾವೆಲ್ಲರೂ ಯೋಚಿಸಬೇಕಾದ ವಿಷಯ.

ಇಂದು ಹೆಣ್ಣು ಮಕ್ಕಳಿಗೆ ರಕ್ಷಣೆ ಇಲ್ಲದಂತಾಗಿದೆ. ಎಲ್ಲಿ ನೋಡಿದರೂ ಅತ್ಯಾಚಾರ. ಕೊಲೆ. ಇದಕ್ಕೆ ಕಾರಣವೇನು? ನಮ್ಮ ಕಾನೂನು ವ್ಯವಸ್ಥೆ ದುರ್ಬಲವಾಗಿರೋದೆ ಕಾರಣ. ಅಪರಾದ ಸಾಬೀತಾದ ತಕ್ಷಣ ತಪ್ಪಿತಸ್ಥರಿಗೆ ನೇರವಾಗಿ ಮರಣದಂಡನೆಯನ್ನು ವಿಧಿಸಬೇಕು. ನಿರುದ್ಯೋಗದಿಂದ ಜನತೆ ಹೊಟ್ಟೆಪಾಡಿಗಾಗಿ ಯಾವ ಕೆಲಸಕ್ಕೂ ಹಿಂಜರಿಯುವುದಿಲ್ಲ. ಹಣಕ್ಕಾಗಿ ಇನ್ನೊಬ್ಬರನ್ನು ಬಲಿ ತೆಗೆದುಕೊಳ್ಳಲು ಹಿಂದು ಮುಂದು ನೋಡುವುದಿಲ್ಲ. ಭ್ರಷ್ಟಾಚಾರದಿಂದ ದೇಶವನ್ನು ಮುಕ್ತಗೊಳಿಸಿ, ಜನತೆಗೆ ಒಳ್ಳೆಯ ಆಡಳಿತವನ್ನು ನೀಡುವುದರತ್ತ ನಮ್ಮ ಸರಕಾರ ಗಮನಹರಿಸಬೇಕು. ಇಂದು ದೇಶದೆಲ್ಲೆಡೆ ಪ್ರಚಲಿತದಲ್ಲಿರುವವರು ಗಾಂಧೀವಾದಿ ಅಣ್ಣಾ ಹಜಾರೆಯುವರು. ಭ್ರಷ್ಟಾಚಾರದ ನಿರ್ಮೂಲನಕ್ಕಾಗಿ ಪಣ ತೊಟ್ಟಿದ್ದಾರೆ. ಲೋಕಪಾಲ್ ಮಸೂದೆಗಾಗಿ ಹಠಹಿಡಿದಿರುವ ಅಣ್ಣ ಹಜಾರೆಯುವರಂಥವರ ಶಾಂತಿಯುತ ಪ್ರತಿಭಟನೆಗೆ ಭಾರತೀಯರಾದ ನಾವೆಲ್ಲರೂ ಕೈ ಜೋಡಿಸೋಣ. ಇನ್ನಾದರೂ ಭಾರತ ದೇಶವು ಇತರ ದೇಶಗಳಂತೆ ಪ್ರಗತಿ ಹೊಂದಿ ಭ್ರಷ್ಟಾಚಾರದಿಂದ ಮುಕ್ತವಾಗಿ ವಿಶ್ವದ ಒಂದು ಉತ್ತಮ ದೇಶವಾಗಿ ಹೊರಹೊಮ್ಮಲಿ ಎಂದು ಆಶಿಸೋಣ. ■

---

**ನೀನಿಲ್ಲ...**

ಅದೆಲ್ಲೋ ಇಲ್ಲೇ...
ನನ್ನ ಬೆನ್ನ ಹಿಂದೆ
ನೀ ನಿಂತಿರುವಂಥಾ
ಹಿತವಾದ ಅನುಭವ..
ಎದುರು ಬಾರದೆ
ಸತಾಯಿಸುವ ಹಾಗೆ..
ಈ ರೀತಿ
ಅನಿಸಿದಾಗಲೆಲ್ಲಾ
ಹಿಂತಿರುಗಿ
ನೋಡಿ ನೋಡಿ
ಸಾಕಾಗಿ ಹೋಗಿದೆ
ನೋಡಿದಾಗ
ನೀನಿರುವುದೇ ಇಲ್ಲ...
ಸಾಕು ಇನ್ನೆಂದೂ
ನಾ ಹಿಂತಿರುಗುವುದಿಲ್ಲ
ಕರೆದರೂ ನೀ ನನ್ನ
"ಓ ನನ್ನ ನಲ್ಲ"
ನನ್ನ ಪಾಲಿಗೆ ನೀನಿಲ್ಲ
ನಿನ್ನ ಪಾಲಿಗೆ ನಾನಿಲ್ಲ



–ಕೆ. ಗುರುಪ್ರಸಾದ್

# Raashi touched the soul and healed the body



***TOAST TO KANNADA: A are photo of litterateurs M Shivaram (second from left) with Masti Venkatesha Iyengar, Kailasam, Na Kasturi, C K Venkataramaiah, V Seetharamaiah, Da Ra Bendre***.

Dr. Shivaram was an ideal family doctor who not only heard the biological problems of his patients. But also their psychological and financial travails. Raashi, as Dr.Shivaram was known in literary circles, practised medicine with a scientific temper and sensible analysis, and treated patients with timely counselling and practical prescription. Says Dr. Parameshwara, a heart specialist.

Raashi's rich experience as a physician was narrated in his two invaluable books - Manamanthana and Manonandana, both bagged academy awards. During this centenary year of Raashi, both works are available for Kannadigas. Manamanthana, a book on psychiatry, is being released on November 10, a fitting finale to Raashi's centenary and a grand gift to Kannadigas.

In all, Raashi wrote 41 books and, unfortunately, only a few are available now. His study of Upanishads is revealed in Death and Nachikethas, written in English. Death always fascinated Raashi, who has discussed this "ultimate truth" in detail in the book. He always said: "We must welcome death and not face it." When a journalist approached him for a photograph when he was ill, Raashi in his typical humour said, "Why don't you wait for a couple of days My photo will be published in all papers."

Raashi was running his clinic at Majestic It was a place not only patients, but also writers and friends. Once, a young patient dashed in complaining of a chest pain, worrying that he might be suffering from a heart problem. And Raashi's reply to that? "You cannot get heart trouble at this age. I think you can only have sweet -heart trouble."

Raashi once strongly protested to a policeman putting up a traffic signal in front of his clinic. The reason; "How can you put up 'oneway' board in front of a doctor's clinic? Who will dare come inside afterwards?"

That's Raashi for you.

**- Krishna Subbarao (humorist)**

(ಕೃಪೆ - ಟೈಮ್ಸ್ ಆಫ್ ಇಂಡಿಯಾ, ಬೆಂಗಳೂರು.
ಸಂಗ್ರಹ - ಶ್ರೀಮತಿ ವನಜಾ ರಾಜನ್)

# ಮುಂಬಯಿ ಕನ್ನಡ ಕಥಾ ಸಾಹಿತ್ಯ

ಬ್ಯಾಂಕಿನ ಉನ್ನತ ಅಧಿಕಾರಿಯಾಗಿರುವ ಡಾ. ಮಮತಾ ರಾವ್ ಅವರು ಪ್ರವೃತ್ತಿಯಲ್ಲಿ ಸಾಹಿತ್ಯಾಸಕ್ತರು. ಸಂಘ-ಸಂಸ್ಥೆಗಳಲ್ಲಿ ಕ್ರಿಯಾಶೀಲರಾಗಿರುವ ಇವರು ಹಿಂದಿ ಭಾಷೆಯಲ್ಲಿ ಒಳ್ಳೆಯ ಹಿಡಿತ ಹೊಂದಿದ್ದಾರೆ. ಕನ್ನಡ ಮತ್ತು ಹಿಂದಿ ಭಾಷೆಗಳಲ್ಲಿ ಅನೇಕ ಲೇಖನಗಳನ್ನು ಬರೆದು ಪತ್ರಿಕೆಗಳಲ್ಲಿ ಪ್ರಕಟಿಸಿದ್ದಾರೆ. ಮಮತಾ ರಾವ್‌ರವರು ಪ್ರವಾಸ ಪ್ರಿಯರು. ಕೈಲಾಸ ಮಾನಸ ಸರೋವರ ಯಾತ್ರೆ ಕೈಗೊಂಡ ಕನ್ನಡದ ದಿಟ್ಟ ಮಹಿಳೆ. ''ಮುಂಬಯಿ ಕನ್ನಡ ಕಥಾ ಸಾಹಿತ್ಯ'' ಡಾ. ಮಮತಾ ರಾವ್ ಅವರ ಪಿ.ಎಚ್.ಡಿ. ಮಹಾಪ್ರಬಂಧ. ಇದನ್ನು ಕನ್ನಡ ವಿಭಾಗ ಗ್ರಂಥ ರೂಪದಲ್ಲಿ ಬೆಳಕಿಗೆ ತಂದಿದೆ. ಏಳು ಅಧ್ಯಾಯಗಳಿಂದ ಕೂಡಿದ ಈ ಮಹಾಪ್ರಬಂಧವು ಮುಂಬಯಿ ಕನ್ನಡ ಕಥಾ ಸಾಹಿತ್ಯದ ಮೇಲೆ ಕ್ಷ-ಕಿರಣ ಬಿರುತ್ತದೆ. ಆರಂಭದ ಅಧ್ಯಾಯದಲ್ಲಿ ಮುಂಬಯಿ ಕನ್ನಡ ಕಥಾ ಸಾಹಿತ್ಯದ ಅಧ್ಯಯನ ಉದ್ದೇಶ - ವ್ಯಾಪ್ತಿ ಮತ್ತು ಆಕರಗಳ ಚರ್ಚೆ ಮಾಡಲಾಗಿದೆ. ಸ್ವಾತಂತ್ರ್ಯ ಪೂರ್ವದಲ್ಲಿ ಕೃಷ್ಣ ಕುಮಾರ ಕಲ್ಲೂರರ 'ಮಂಗನ ಮೆರವಣಿಗೆ' (1930) ಕಥಾ ಸಂಕಲನದಿಂದ ಇತ್ತೀಚಿನ ಹೊಸ ಕಥೆಗಾರರಾದ ವಾಸುದೇವ ಕಾಣೆಮಾರರ 'ಮುಂಬಯಿ ಕಥೆಗಳು' (2010)ವರೆಗಿನ ಕಥಾಸಂಕಲನಗಳನ್ನು ಆಕರಗಳನ್ನಾಗಿ ಬಳಸಿಕೊಂಡಿದ್ದಾರೆ. ಪ್ರಕಟವಾಗದ ಮಹತ್ವದ ಕಥೆಗಾರರ ಕಥೆಗಳನ್ನು ಇಲ್ಲಿ ಗಮನಿಸಲಾಗಿದೆ. ಮುಂಬಯಿ ಮಹಿಳಾ ಕತೆಗಾರ್ತಿಯರ ಕತೆಗಳನ್ನು ವಿಶೇಷವಾಗಿ ಇಲ್ಲಿ ಅಧ್ಯಯನಕ್ಕೆ ಒಳಪಡಿಸಲಾಗಿದೆ.

'ಕನ್ನಡ ಸಾಹಿತ್ಯದಲ್ಲಿ ಸಣ್ಣ ಕಥೆಯ ಹೆಜ್ಜೆ-ಹಾದಿ' ಇದು ಎರಡನೆಯ ಅಧ್ಯಾಯವಾಗಿದೆ. ಇಲ್ಲಿ ಸಣ್ಣಕಥಾ ಸಾಹಿತ್ಯ ಬೆಳವಣಿಗೆಯ ಕುರಿತು ಚರ್ಚಿಸಲಾಗಿದೆ. ಸಣ್ಣ ಕಥೆಯು ಭಾರತದ ಜನಪದ ಸಾಹಿತ್ಯದಲ್ಲಿಯೇ ಇದೆ. ಭಾರತೀಯ ವೇದ ಉಪನಿಷತ್ತುಗಳು, ಬೈಬಲ್, ಕುರಾನ್ ಇವೆಲ್ಲವುಗಳ ನಿರೂಪಣೆ ಕಥನ ಶೈಲಿಯಲ್ಲಿದೆ. ಸಣ್ಣ ಕಥೆಯ ಉಗಮ, ವಿಕಾಸ ಭಾರತೀಯ ಮತ್ತು ಪಾಶ್ಚಾತ್ಯರಲ್ಲಿ ಹೇಗೆ ನಡೆದು ಬಂದಿದೆ ಎಂಬುದನ್ನು ವಿದ್ವಾಂಸರ ವ್ಯಾಖ್ಯಾನಗಳಿಂದ ವಿವರಿಸಿದ್ದಾರೆ. ಆಧುನಿಕ ಕನ್ನಡ ಸಾಹಿತ್ಯದಲ್ಲಿ ಸಣ್ಣ ಕಥೆಗಳಿಗೆ ವಿಶಿಷ್ಟವಾದ ಸ್ಥಾನವಿದೆ. ಪಂಜೆ ಮಂಗೇಶರಾಯ, ಎಂ.ಎನ್. ಕಾಮತ್, ಕೆರೂರ ವಾಸುದೇವಾಚಾರ್ಯ, ಮಾಸ್ತಿಯವರಿಂದ ಇತ್ತೀಚಿನವರೆಗೆ ಸಣ್ಣ ಕಥೆಯ ದೊಡ್ಡ ಪರಂಪರೆ ಇದೆ. ಸಣ್ಣಕಥೆಗಳು ನಾಡಿನ ಲೇಖಕರಿಂದ ವಿಪುಲವಾಗಿ ರಚನೆಗೊಂಡಿವೆ. ಇದಕ್ಕೆ ಹೊರನಾಡಿನ ಮುಂಬಯಿ ಲೇಖಕರು ಹೊರತಾಗಿಲ್ಲ. ಕನ್ನಡ ಸಾಹಿತ್ಯ ಚರಿತ್ರೆಗೆ ಮುಂಬಯಿ ಲೇಖಕರ ಕೊಡುಗೆ ಅಪಾರವಾದುದು.

ಮುಂಬಯಿ ಕನ್ನಡ ಕಥಾ ಸಾಹಿತ್ಯ ಬೆಳೆದು ಬಂದುದರ ವಿವರಣೆ ಮೂರನೆಯ ಅಧ್ಯಾಯದಲ್ಲಿದೆ. ಕರ್ನಾಟಕದ ನಾಲ್ಕು ಜಿಲ್ಲೆಗಳಾದ ಧಾರವಾಡ, ಬೆಳಗಾವಿ, ಬಿಜಾಪುರ ಮತ್ತು ಉತ್ತರ ಕನ್ನಡ ಬ್ರಿಟಿಷರ ಕಾಲದಲ್ಲಿ ಮುಂಬಯಿ ಪ್ರಾಂತದ ಅಧೀನದಲ್ಲಿದ್ದವು. ಉದ್ಯೋಗ ನಿಮಿತ್ತವಾಗಿ, ಉನ್ನತ ಶಿಕ್ಷಣಕ್ಕಾಗಿ ಹೆಚ್ಚಿನ ಕನ್ನಡಿಗರು ಮುಂಬಯಿಗೆ ಬಂದು ನೆಲೆಸಿದರು. ವಾಣಿಜ್ಯ ನಗರವಾದ ಮುಂಬಯಿಯಲ್ಲಿ ತಮ್ಮತನ ಕಾಪಿಟ್ಟುಕೊಳ್ಳುವ ಸಲುವಾಗಿ ಸಂಘ-ಸಂಸ್ಥೆಗಳನ್ನು, ಪತ್ರಿಕೆಗಳನ್ನು ಆರಂಭಿಸಿದರು. ಮುಂಬಯಿ ಲೇಖಕರ ಸಾಹಿತ್ಯ ನಿರ್ಮಿತಿಯ ಮೂಲ ಕಾರಣವನ್ನು ಮಮತಾರಾವ್ ಅವರು ಹೀಗೆ ಹೇಳುತ್ತಾರೆ. ''ಈ ಮಹಾನಗರದ ಜನಸಂಖ್ಯೆಯಲ್ಲಿ ತಮ್ಮನ್ನು ತಾವು ಕಳೆದುಕೊಳ್ಳುವ ಭಯದಿಂದ ಇವರು ಒಂದಾದರು. ಕನ್ನಡ ಸಂಘ ಸಂಸ್ಥೆಗಳನ್ನು ಕಟ್ಟಿಕೊಂಡರು. ಕನ್ನಡ ಪತ್ರಿಕೆಗಳನ್ನು ಪ್ರಕಟಿಸಿದರು. ಕನ್ನಡವನ್ನು ಉಳಿಸಿ ಬೆಳೆಸಲೂ ಸಾಧ್ಯವಿದ್ದ ಎಲ್ಲವನ್ನೂ ಮಾಡಿದರು. ಇವರ ಪ್ರಾಮಾಣಿಕ ಪ್ರಯತ್ನದಿಂದಾಗಿ ಇಂದಿಗೂ ಕನ್ನಡ ಭಾಷೆ, ಕನ್ನಡ, ಸಂಸ್ಕೃತಿ ಇಲ್ಲಿ ಆರೋಗ್ಯದಿಂದ ಉಸಿರಾಡುತ್ತಿದೆ. ತಮ್ಮ ಜನ್ಮಭೂಮಿಗೂ, ಕರ್ಮಭೂಮಿಗೂ ಕೀರ್ತಿ ತರುವಂತಹ ಕಾರ್ಯಗಳನ್ನು ಮಾಡುತ್ತಿರುವ ಮುಂಬಯಿ ಕನ್ನಡಿಗರ ಪ್ರಾಮಾಣಿಕ ಪ್ರಯತ್ನದಿಂದಾಗಿ ಕನ್ನಡ ಸಾಹಿತ್ಯವು ತನ್ನೆಲ್ಲ ಪ್ರಕಾರಗಳಲ್ಲಿ ಹೊಸ ಹೊಸ ಸಾಧ್ಯತೆಗಳನ್ನು, ಧೋರಣೆಗಳನ್ನು ಅಭಿವ್ಯಕ್ತಿಸಿರುವುದನ್ನು ನಾವು ಕಾಣುತ್ತೇವೆ'' ಎಂಬುದನ್ನು ಸಕಾರಣವಾಗಿಯೇ ಸ್ಪಷ್ಟಪಡಿಸಿದ್ದಾರೆ.

ನಾಲ್ಕನೆಯ ಅಧ್ಯಾಯದಲ್ಲಿ 59 ಕಥೆಗಾರರನ್ನು ಪರಿಚಯಿಸಿಕೊಡಲಾಗಿದೆ. ಮುಂಬಯಿ ಲೇಖಕರ ತೊಂಬತ್ತಮೂರು ಕಥಾಸಂಕಲನಗಳಲ್ಲಿ ಬರುವ 1124 ಕಥೆಗಳನ್ನು ಪ್ರಾಸಂಗಿಕವಾಗಿ ವಿಶ್ಲೇಷಣೆ ಮಾಡಿದಾರೆ. ಕೃಷ್ಣಕುಮಾರ ಕಲ್ಲೂರ ಅವರು ಮುಂಬಯಿ ಕಥೆಗಾರರಲ್ಲಿ ಆದ್ಯ ಕಥೆಗಾರರಾಗಿದ್ದಾರೆ. 1930 ರಲ್ಲಿ ರಚಿಸಿದ ಮಂಗನ ಮೆರವಣಿಗೆ, ಫಕ್ಕೀರಪ್ಪನ ಪುಣ್ಯ, ಬಿಸಿಲುಗುದುರೆ ಇವು ಅವರ ಪ್ರಮುಖ ಕಥೆಗಳಾಗಿವೆ. ಯಶವಂತ ಚಿತ್ತಾಲ, ವ್ಯಾಸರಾಯ ಬಲ್ಲಾಳ, ವ್ಯಾಸರಾವ ನಿಂಜೂರ, ಜಯಂತ ಕಾಯ್ಕಿಣಿ, ಶಾಂತಿನಾಥ ದೇಸಾಯಿ ಮೊದಲಾದ ಕಥೆಗಾರರ ಕಥೆಗಳು ಮುಂಬಯಿ ಮಹಾನಗರದ ಬದುಕಿನ ಚಿತ್ರಣ ನೀಡುತ್ತವೆ. ಇವರ ಕಥೆಗಳಲ್ಲಿ ನಗರೀಕರಣದ ಪಾತ್ರಸೃಷ್ಟಿ ಮತ್ತು ಸನ್ನಿವೇಶಗಳು ಓದುಗರ, ವಿಮರ್ಶಕರ ಗಮನ ಸೆಳೆದಿವೆ. ಎಂ.ಬಿ. ಕುಕ್ಯಾನ್‌ರು ಪಾವಣೆ, ಮೋಸದ ತಿರುವುಗಳು, ಮೋಸದ ಮುಖಗಳು ಈ ಕಥೆಗಳಿಂದ ಭಿನ್ನ ಕಥೆಗಾರನಾಗಿ ಕಾಣಿಸುತ್ತಾರೆ. ಸದಾನಂದ ಸುವರ್ಣರು ಮೂಲತಃ ರಂಗಕರ್ಮಿ. ಅವರು ನಾಟಕ ನಿರ್ದೇಶಕರು ಹೌದು. ಆದರೆ, ಸುವರ್ಣರ ಚಿನ್ನದ ಗೊಂಬೆ ಕಥಾ ಸಂಕಲನದಲ್ಲಿ ಸ್ತ್ರೀಪರ ಚಿಂತನೆ ಕಂಡು ಬರುವುದಾಗಿ ಲೇಖಕಿ ಅಭಿಪ್ರಾಯಪಟ್ಟಿದ್ದಾರೆ.

ಐದನೆಯ ಅಧ್ಯಾಯದಲ್ಲಿ ಹನ್ನೆರಡು ಮುಂಬಯಿ ಮಹಿಳಾ ಲೇಖಕಿಯರ ಪರಿಚಯ ಮಾಡಿಕೊಡಲಾಗಿದೆ. ಕನ್ನಡ ಸಾಹಿತ್ಯ ಕ್ಷೇತ್ರಕ್ಕೆ ಮುಂಬಯಿ ಮಹಿಳೆಯ ಕತೆಗಳ ಕೊಡುಗೆ ಅನುಪಮವಾದುದು. ಮುಂಬಯಿ ಲೇಖಕಿಯರು ಕರ್ನಾಟಕದಲ್ಲಿ ಹುಟ್ಟಿ ಬೆಳೆದವರು. ಮದುವೆಯಾಗಿ ಗಂಡನೊಂದಿಗೆ ಈ ಮಹಾನಗರದಲ್ಲಿ ಬಂದು ನೆಲೆಸಿದವರು. ತಮ್ಮ ಕೌಟುಂಬಿಕ ಕಾರ್ಯಗಳನ್ನು ಮಾಡುತ್ತ, ಉಳಿದ ಸಮಯವನ್ನು ಸಾಹಿತ್ಯ ನಿರ್ಮಿತಿಯಲ್ಲಿ ತೊಡಗಿಸಿಕೊಂಡಿರುವುದು ಪ್ರಶಂಸನೀಯವಾಗಿದೆ. ಮುಂಬಯಿ ಮಹಿಳೆಯರ ಕಥೆಗಳಲ್ಲಿ ಕೌಟುಂಬಿಕ ಸಮಸ್ಯೆಗಳು, ಸ್ತ್ರೀಯರ ಸಾಮಾಜಿಕ ಸ್ಥಾನಮಾನಗಳ ಅವಲೋಕನ ಮಾಡಲಾಗಿದೆ. ವಾಸಂತಿ ಪಡುಕೋಣೆ, ಲಲಿತಾ ರಾಮಣ್ಣ, ಮಿತ್ರಾ ವಂಕಟ್ರಾಜ್, ತುಳಸಿ ವೇಣುಗೋಪಾಲ, ಮಣಿಮಾಲಿನಿ, ಮೀನಾ ಕಳಾವಾರ ಮೊದಲಾದ ಲೇಖಕಿಯರ ಕಥೆಗಳಲ್ಲಿ ಆಧುನಿಕ ಸ್ತ್ರೀಪರ ದೃಷ್ಟಿಕೋನಗಳಿವೆ. ಡಾ. ಮಲ್ಲಿಕಾ ಘಂಟಿಯವರು 'ಕನ್ನಡದಲ್ಲಿ ಮಹಿಳಾ ಕಥಾ ಸಾಹಿತ್ಯ' ಸಂಶೋಧನ ಮಹಾಪ್ರಬಂಧದಲ್ಲಿ ಕರ್ನಾಟಕ ಸೀಮೆಯಾಚೆಗಿರುವ ಯಶಸ್ವಿ ಮಹಿಳಾ ಕಥೆಗಾರರನ್ನು ಗಮನಿಸಲೇ ಇಲ್ಲ ಎಂಬುದಾಗಿ ಡಾ. ಮಮತಾ ರಾವ್ ಅವರು ವಿಷಾದ ವ್ಯಕ್ತಪಡಿಸಿದ್ದಾರೆ.

ಮುಂಬಯಿ ಕಥೆಗಳ ಅನನ್ಯತೆ ಬಗ್ಗೆ ಮಮತಾರಾವ್ ಅವರು ಹೀಗೆ ನುಡಿಯುತ್ತಾರೆ, ''ಸಾಮಾಜಿಕ ಹಾಗೂ ರಾಜಕೀಯ ಸ್ಥಿತ್ಯಂತರಗಳಿಗೆ ಮುಂಬಯಿ ಲೇಖಕರು ಪ್ರಮುಖ ಧಾರೆಯ ಲೇಖಕರಿಂದ ಭಿನ್ನವಾಗಿ ಪ್ರತಿಕ್ರಿಯಿಸುವ ರೀತಿ, ಅವರ ಕಥೆಗಳ ಮೂಲಕ ಹೊರಹೊಮ್ಮಿದ ಪರಿ ವೈಶಿಷ್ಟ್ಯಪೂರ್ಣವಾದುದು. ವಸ್ತುವಿನಲ್ಲಿ, ತಂತ್ರದಲ್ಲಿ, ಭಾಷೆಯಲ್ಲಿ ಮುಂಬಯಿ ಕನ್ನಡ ಕಥೆಗಳಲ್ಲಿ ಕಾಣಿಸುವ ಹೊಸತನ, ಅನನ್ಯತೆ ಇತರ ಕಥೆಗಳಿಂದ ಭಿನ್ನವಾಗಿದೆ'' ಎಂದು ಹೇಳಿದ ಮಾತಿನಲ್ಲಿ ತಥ್ಯವಿದೆ. ವಿ.ಜಿ. ಭಟ್ಟರು ವೃದ್ಧರ ಮನೋರಂಜನೆಗಾಗಿ ಹಲವು ಕತೆಗಳನ್ನು ಬರೆದಿದ್ದಾರೆ. ವ್ಯಾಸರಾವ್ ಬಲ್ಲಾಳರು 'ಮುಸ್ಸಂಜೆ ಕಥೆ'ಗಳಲ್ಲಿ ವೃದ್ಧಾಪ್ಯದಲ್ಲಿರುವ ಒಂಟಿತನ, ಅನಾಥ ಪ್ರಜ್ಞೆ, ಆತಂಕ, ಅಸಹಾಯಕತೆಯ್ನು ಮನೋಜ್ಞವಾಗಿ ಚಿತ್ರಿಸಿದ್ದಾರೆ. ಮಹಾನಗರದ ವಸತಿ ಸಮಸ್ಯೆ ಚಿತ್ರಣ ಮುಂಬಯಿಯ ಕಥೆಗಳಲ್ಲಿ ಅದ್ಭುತವಾಗಿ ಮೂಡಿ ಬಂದಿದೆ ಎಂದಿದ್ದಾರೆ ಲೇಖಕಿ.

ಕೊನೆಯ ಅಧ್ಯಾಯ ಸಮಾರೋಪ. ಕೃಷ್ಣ ಕುಮಾರ ಕಲ್ಲೂರರು ನವೋದಯ ಕಾಲದಲ್ಲಿ ಸಣ್ಣಕತೆಯೆಂಬ ನೂತನ ಸಾಹಿತ್ಯ ಪ್ರಕಾರಕ್ಕೆ ನಾಂದಿ ಹಾಡಿದವರಲ್ಲಿ ಒಬ್ಬರಾಗಿದ್ದಾರೆ. ಪಂಜೆ, ಮಾಸ್ತಿ, ಆನಂದ, ಆನಂದಕಂದ ಲೇಖಕರೊಡನೆ ಕಲ್ಲೂರರು ವಿಶಿಷ್ಟ ಸ್ಥಾನ ಪಡೆದುಕೊಳ್ಳುತ್ತಾರೆ ಎಂಬುದನ್ನು ಲೇಖಕಿ ತೋರಿಸಿಕೊಟ್ಟಿದ್ದಾರೆ. ಮುಂಬಯಿ ಲೇಖಕರು ತಮ್ಮ ಬದುಕನ್ನು ಕಂಡುಕೊಂಡ ರೀತಿಯನ್ನು ಇಲ್ಲಿಯ

✍ ದುರ್ಗಪ್ಪ ಯ. ಕೊಟಿಯವರ, ಡೊಂಬಿವಲಿ

ಕಥೆಗಳ ಮೂಲಕ ಅರಿತುಕೊಳ್ಳಬಹುದು. ಮುಂಬಯಿ ಕಥಾ ಸಾಹಿತ್ಯವು ಕನ್ನಡ ಸಾಹಿತ್ಯಕ್ಕೆ ನೀಡಿದ ಕೊಡುಗೆಯನ್ನು ಸೋದಾಹರಣವಾಗಿ ದಾಖಲಿಸಿದ್ದಾರೆ. ಸಂಶೋಧನೆಯ ದೃಷ್ಟಿಯಿಂದ ಇಲ್ಲಿ ಅಧ್ಯಯನಕ್ಕೆ ಹೊಸ ಸಾಧ್ಯತೆಗಳಿವೆ ಎಂಬುದನ್ನು ತಿಳಿಸಿದ್ದಾರೆ. ಈ ಮಹಾಪ್ರಬಂಧ ಕುರಿತು ಮುಂಬಯಿಯ ಹಿರಿಯ ವಿಜ್ಞಾನಿ, ಲೇಖಕರಾದ ಡಾ. ವ್ಯಾಸರಾವ್ ನಿಂಜೂರ ಅವರು ಹೀಗೆ ಬರೆಯುತ್ತಾರೆ, "ಈ ಮಹಾಪ್ರಬಂಧವು ಮುಂಬಯಿ ಕನ್ನಡಿಗರ ಕೊಡುಗೆಯನ್ನು ತಳಮಟ್ಟದಲ್ಲಿ ಸಂಶ್ಲೇಷಿಸಿ ಅದರ ಮಹತ್ವನ್ನು ಕನ್ನಡ ಸಾಹಿತ್ಯ ವಲಯಕ್ಕೆ ಪರಿಚಯಿಸುವ ನಿಟ್ಟಿನಲ್ಲಿ ಒಂದು ಮೈಲಿಗಲ್ಲಾಗುವ ಕೃತಿ" ಎಂದು ಹೇಳಿರುವುದು ಉಲ್ಲೇಖನೀಯವಾಗಿದೆ.

---

# ಬದುಕಬಿಡಿ ನನ್ನ



✍ ಶಾರದಾ ಎ. ಅಂಚನ್

ಅಯ್ಯಾ ದಮ್ಮಯ್ಯಾ
ಬದುಕಬಿಡಿ ನನ್ನ
ಸೂರ್ಯಚಂದ್ರರ ಬೆಳಕು ತುಂಬಿದ
ಸಪ್ತಸಾಗರಗಳನಾವರಿಸಿರುವ
ಕೋಟಿ ನಕ್ಷತ್ರಗಳ ಹೊಳಪು ತುಂಬಿದ
ಲೋಕವನ್ನೊಮ್ಮೆ ಕಂಡು ತೆರಳಲು
ಅನುಮತಿಯಾದರೂ ಕೊಡಿ
ನಿಮ್ಮ ಖುಷಿಯ ನಶೆಯಲಂದು
ಭ್ರೂಣವಾಗಿ ಬಬಲಿಯುತಿರುವೆನಿಂದು
ಬೆಳೆಯಲು ಬಿಡುವಿರೋ ನನ್ನ
ಹಿಚುಕಿ ಹಾಕದಿರಿ ದಮ್ಮಯ್ಯಾ ನಿಮ್ಮ
ಗರ್ಭದೊಳಗಿಂದಲೇ ಕಣ್ಣು ಬಿಡುತಲಿರುವೆ
ಕ್ಷಣಕ್ಷಣವೂ ಹಂಬಲಿಸುತಿರುವೆ
ನವಮಾಸಗಳ ಕಳೆದು ಬೆಳೆದು
ಮಾತೃಸ್ಪರ್ಷಕ್ಕೆ ಸಿಲುಕಿ ಪುಳಕಗೊಳ್ಳಲು
ತಿಳಿಯಲಾರದ ಆವೇಗ
ಮನದ ತುಂಬಾ ಉದ್ವೇಗ
ಎಂದು ಹೊರಬರಲಿರುವೆ ಬದುಕಬಯಲಿಗೆ
ಶಿರಬಾಗಲಿರುವೆ ಜನ್ಮವೆತ್ತವರಿಗೆ
ಮುರುಟಿಕೊಂಡ ದೇಹಕೊಡವಿ
ನಿರಾಳ ಉಸಿರ ಹಸಿರ ತೋರಣಕೆ
ಅವಿತಿರುವೆ ಹೊತ್ತ ಮಾತೆಯ ಬಸಿರಲಿ
ತೇಯುತ್ತಿರುವೆ ಅವಳುಸಿರ ಒಸರಲಿ
ಒದ್ದ ನಿಮ್ಮ ಕಾಲ್ತುಳಿತಕ್ಕೆ
ಇದ್ದ ನನ್ನಮ್ಮನ ರಭಸಕ್ಕೆ
ಕುಗ್ಗಿ ಛಿದ್ರವಾಗುತಲಿರುವೆ
ನನಗೆ ನಾ ಆಸರೆಯಾಗುವೆ
ಹೆತ್ತ ನಿಮಗೂ ಆರೈಕೆ ನೀಡುವೆ
ಗಂಜಿ ಅಂಬಲಿಯಾದರೂ ಕುಡಿದು ಬದುಕುವೆ
ಹೆಣ್ಣು ಹೆಣ್ಣೆಂದು ಜರೆವರೆದುರು
ಗಂಡಾಗಿ ತಲೆಯೆತ್ತಿ ಬದುಕುವೆ
ದಮ್ಮಯ್ಯಾ ಭರವಸೆಯಿಡಿ ನನ್ನಲ್ಲಿ
ಹೆಣ್ಣು ಪಿಂಡವೆಂದು ತಿರಸ್ಕರಿಸಿ
ನನ್ನಸ್ತಿತ್ವದ ಬುನಾದಿಗೆ ಕೊಡಲಿಯೇಟು ಹಾಕದಿರಿ
ಬೆಣ್ಣೆ ಮೈಯ ಹಿಚುಕದಿರಿ
ಮರಳಿ ಮಣ್ಣಲಿ ಹೂಳದಿರಿ!

# ಜಗಜ್ಯೋತಿ ಬಸವಣ್ಣ

ಬಸವ ಬಸವಣ್ಣ ಬಸವೇಶ್ವರ
ಮಾದರಸ ಮಾದಲಾಂಬಿಕೆಯರ ಪ್ರೇಮದ ಕುವರ
ವಿಜಾಪುರದ ಬಾಗೇವಾಡಿಯಲಿ ಅವತರಿಸಿದ
ಜಾತಿ ಮತ ಭೇದವನು ಮೀರಿ ನಿಂತ
ಸತ್ಯ ಸದಾಚಾರಗಳ ನಿತ್ಯ ಪಾಲಿಸಿದನೀತ
ದಯೆಯೇ ಧರ್ಮದ ಮೂಲವೆಂದು ಸಾರಿದಾತ
ಕಲಬೇಡ ಕೊಲಬೇಡ ಹುಸಿಯ ನುಡಿಯಲು ಬೇಡ
ಇದೇ ಅಂತರಂಗ ಶುದ್ಧಿ ಬಹಿರಂಗ ಶುದ್ಧಿಯೆಂದಾತ
ಕಲ್ಯಾಣದಲಿ ಅನುಭವ ಮಂಟಪ ತೆರೆದು
ಸಾಮಾನ್ಯರನೂ ಅಸಾಮಾನ್ಯರಾಗಿಸಿದವನೀತ
ಮಹಿಳೆಯರಿಗೂ ಸಮಾನತೆಯ ಮಣೆ ನೀಡಿ
ಶಿವಶರಣೆಯನ್ನಾಗಿಸಿ ಧನ್ಯರನ್ನಾಗಿಸಿದ ಶರಣಶ್ರೇಷ್ಟ
ಆಡಂಬರದ ಪೂಜೆಯನ್ನು ದೂರವಿಟ್ಟು
ಶುದ್ಧ ಭಕ್ತಿ ದೇವರಿಗೆ ಪ್ರಿಯವಾದುದೆಂದು ತಿಳಿಸಿದಾತ
ಲೋಕ ಕಲ್ಯಾಣಕೆ ತನ್ನ ಬದುಕನ್ನೇ ಪಣಕಿಟ್ಟವನೀತ
ಸರ್ವರಿಗೂ ಸಮಬಾಳು ಸಮಪಾಲು ಎಂದವನು
ಕರ್ತವ್ಯವನೇ ಕೈಲಾಸವೆಂದು ನಂಬಿ ಬದುಕಿದವ
ಮಾನವನ ಬದುಕಿಗೆ ಬೆಳಕು ತೋರಿದಾತ
ಕನ್ನಡ ಭಾಷೆಯಲ್ಲೇ ಆಹಿತ್ಯ ರಚಿಸಿದಾತನೀತ
ಜಗಜ್ಯೋತಿ ಬಸವೇಶ್ವರ
ಬಸವ ಬಸವಣ್ಣ ಬಸವೇಶ್ವರ



*- ಲೇ. ಡಾ. ಕರುಣಾಕರ್ ಎನ್. ಶೆಟ್ಟಿ ಪಣಿಯೂರ್*

---

# ಸುಪ್ರಭಾತ

ಸುಪ್ರಭಾತದಲಿ ಗಿರಿಯಂಚಿನಿಂದ
ಬೆಳಗುತ ಬರುವನು ದಿನಕರನು
ಕೆಂಪನೆ ನೇಸರ ಬೆಳಗಲು ಪರಿಸರ
ಎಲ್ಲಡೆ ಚೆಲುವನು ಚೆಲ್ಲುವನು
ತಣ್ಣನೆ ಗಾಳಿಯು ಸಣ್ಣಗೆ ಬೀಸಲು
ಸುಳಿಯುವುದು ಪರಿಮಳ ಗಮಗಮಿಸಿ
ಅರಳುವ ಸುಮಗಳು ಸುಗಂಧ ಸೂಸಲು
ಅಲೆವುದು ದುಂಬಿಯು ಝೇಂಕರಿಸಿ
ಹೂಗಳ ದಳಗಳು ಹೊಳೆವವು ಅರಳಲು
ಬೆಳಗಲು ಭಾಸ್ಕರ ನಸುಕಿನಲಿ
ದಪ್ಪನೆ ಎಲೆಯಲಿ ಇಬ್ಬನಿ ಉರುಳಲು
ಲಕಲಕ ಹೊಳೆವುದು ಕಿರಣದಲಿ
ಹಾರುವ ಹಕ್ಕಿಯು ಬಳಗವ ಕರೆಯಲು
ಚಿಲಿಪಿಲಿ ಕಲರವ ಮರದಲಿ
ಝರಿಯಲಿ ಚಿಮ್ಮುವ ತಿಳಿಜಲ ಹೊಮ್ಮಲು
ಜುಳುಜುಳು ನಾದವು ಗಿರಿಯಲ್ಲಿ
ಹೊಳೆಯಲಿ ತೆರೆಗಳು ಹೊಳೆವವು ಪಳಪಳ
ಹರಿಯಲು ಕಿರಣವು ಜಲದಲ್ಲಿ
ದೋಣಿಯ ನಡೆಸುವ ನಾವಿಕ ಹಾಡಲು
ನಾದವು ಅಲೆವುದು ಜಗದಲ್ಲಿ

*- ಆರ್.ಎಚ್. ನಾಯಕ್, ಡೊಂಬಿವಲಿ*

ಕೃತಿ ಪರಿಚಯ

# ಶ್ರೀ ಸಾಯಿ ಸಚ್ಚರಿಕೆ

ಹೇಮಾಡಂಪತರ ಮೂಲ ಮರಾಠಿ ಕಾವ್ಯರೂಪದಿಂದ
ಕನ್ನಡ ಗದ್ಯಾನುವಾದ ಶ್ರೀ ಸಿ. ಎಸ್. ದಿನೇಶ್‌ರವರಿಂದ
ಪ್ರಕಾಶಕರು ಸಾಯಿ ಕೇಶರ್ ಪ್ರಕಾಶನ ಪುಣೆ
ಪುಟ ಸಂಖ್ಯೆ : 870
ಬೆಲೆ : 380

ಆಂಗ್ಲ ಭಾಷೆಯಲ್ಲಿ ಮೂಲ ಮರಾಠಿ ಕಾವ್ಯ ರೂಪದಿಂದ ಹೇಮಾಡ ಪಂತರ ಈ ಮೇರು ಕೃತಿಯ ಅನುವಾದ ದೊರೆಯುತ್ತದೆ. ಕನ್ನಡದಲ್ಲಿಯೂ ಹಲವಾರು ಪ್ರಯತ್ನಗಳು ನಡೆದಿದ್ದರೂ ಪ್ರಪ್ರಥಮವಾಗಿ ಪದ್ಯದಿಂದ ಪದ್ಯಕ್ಕೆ ಗದ್ಯಾನುವಾದ ಮಾಡಿರುವುದು ಇದೇ ಮೊದಲ ಬಾರಿಗೆ. ಮೂರು ವರ್ಷಗಳಿಗೂ ಮೀರಿ ಸತತ ಪರಿಶ್ರಮದಿಂದ ಹೊರತಂದಿರುವ ಶ್ರೀ ದಿನೇಶ್‌ರವರ ಈ ಮಹತ್ಕಾರ್ಯ ಪ್ರಶಂಸನೀಯವಾದುದು.

ಗುರುಗಳ ಗುಣಗಾನವನ್ನು ಮಾಡಲು ಎಲ್ಲ ಸಮುದ್ರಗಳನ್ನೂ ಶಾಯಿಯಾಗಿ ಉಪಯೋಗಿಸಿ, ಎಲ್ಲ ಮರಗಳನ್ನೂ ಲೇಖನಿಗಳಾಗಿ ಬಳಸಿದರೂ ಅದು ಸಂಪೂರ್ಣಗೊಳ್ಳದು ಎಂದು ಕಬೀರದಾಸರು ನುಡಿದ್ದಾರೆ. ಯದಾ ಯದಾಹಿ ಧರ್ಮಸ್ಯ ಗ್ಲಾನಿರ್ಭವತಿ ಭಾರತ, ಅಭ್ಯುತ್ಥಾನಮಧರ್ಮಸ್ಯ ತದಾತ್ಮಾನಂದ ಸೃಜಾಮ್ಯಹಂ ಎಂದು ಭಗವಂತನು, ಧರ್ಮದ ಔನ್ನತ್ಯಕ್ಕಾಗಿ ಮತ್ತು ಜನರ ಉದ್ಧಾರಕ್ಕಾಗಿ ಮತ್ತೆ ಮತ್ತೆ ಹುಟ್ಟಿ ಬರುವೆ ಎಂದು ಹೇಳಿದ್ದಾನೆ. ಇದನ್ನು ಪುಷ್ಟೀಕರಿಸುವಂತೆ ಸಾಯಿಬಾಬಾ, ಸ್ರೀ ನರಸಿಂಹ ಸ್ವಾಮೀಜಿ ಮತ್ತು ಶ್ರೀ ರಾಧಾಕೃಷ್ಣ ಸ್ವಾಮೀಜಿಯವರಂತಹ ಮಹಾಮಹಿಮರು ಭಾರತದಲ್ಲಿ ಆಗಿಂದಾಗ್ಗೆ ಹುಟ್ಟಿ ಬಂದಿರುವುದು ಸರ್ವವೇದ್ಯ.

ಶ್ರೀ ಶಿರಡಿ ಸಾಯಿಬಾಬಾರವರ ಜೀವನ ಇದನ್ನು ನಿರೂಪಿಸಿರುವುದರಿಂದ ಬಾಬಾರ ದಿವ್ಯ ನೇತ್ರ ಕಮಲಗಳ ಮಂಗಳ ದೃಷ್ಟಿ ಸದಾ ನಮ್ಮ ಮೇಲೆ ನೆಲೆಸಿರಲು ಇಂಥಹ ಕೃತಿಯನ್ನು ಪುನಃ ಪುನಃ ಓದಿ ಮನನ ಮಾಡುವುದು ಅತ್ಯಾವಶ್ಯಕ. ಸೂರ್ಯನ ಪ್ರಕಾಶದ ಮುಂದೆ ಎಲ್ಲ ದೀಪಗಳೂ ಮಂದವಾಗುವಂತೆ ಸಾಯಿಬಾಬಾರವರ ಕೃಪೆಯಿಂದ ನಮ್ಮೆಲ್ಲ ಸಮಸ್ಯೆಗಳು ಮಂಜಿನಂತೆ ಕರಗಿ ನಮ್ಮ ಆತ್ಮಸ್ಥೈರ್ಯವನ್ನು ಹೆಚ್ಚಿಸುವುದರಲ್ಲಿ ಈ ಕೃತಿಯ ಪಠಣ ನೆರಾಗುತ್ತದೆ. ಪ್ರತಿದಿನ ಇದರ ಪಾರಾಯಣ ನಮ್ಮ ಹಲವು ವೇದನೆಗಳಿಗೆ ದಿವ್ಯೌಷಧವೆಂದು ವೇದ್ಯವಾಗುತ್ತದೆ.

ಹೇಮಾಡ ಪಂತರ ಮೂಲ ಮರಾಠಿ ಕೃತಿಯಿಂದ ಗದ್ಯಾನುವಾದ ಮಾಡಿ ಕನ್ನಡ ಸಾಹಿತ್ಯವನ್ನು ಸಂಪದ್ಭರಿತವನ್ನಾಗಿ ಮಾಡಿರುವ ಶ್ರೀ ದಿನೇಶ್‌ರವರು ಪಡೆದು ಬಂದವರು, ಧನ್ಯರು, ಕೃತಾರ್ಥರು.

ಅಪರೂಪದ ಚಿತ್ರಗಳನ್ನು ಹೊಂದಿದ್ದು ಓದುಗರ, ಭಕ್ತರ, ಸಾಧಕರ ಸಹಜ ಜಿಜ್ಞಾಸೆಯ ಪೂರೈಕೆಗೋ ಎನ್ನುವಂತೆ ಅನುವಾದಕ್ಕೆ ಪೂರಕವಾಗಿರುವಂತೆ ಡಿ.ವಿ.ಜಿ.ವರ 'ಮಂಕುತಿಮ್ಮನ ಕಗ್ಗ'ದಿಂದ ಕಥಾಪಾತ್ರಗಳ, ಸನ್ನಿವೇಶಗಳ, ಘಟನೆಗಳ ಪದಾರ್ಥ ಪ್ರಯೋಗಗಳ ಸಂಯೋಜನಾತ್ಮಕ ವಿಶ್ಲೇಷಣೆ ಇಲ್ಲಿದೆ. ವಿವಿಧ ಪ್ರಚಲಿತ ಸಂಪ್ರದಾಯ ಪಂಥ, ಆಚರಣ ಪದ್ಧತಿಗಳು ಸನಾತನ ಧರ್ಮದಲ್ಲಿ ಕಥಾವಸ್ತುವಿನಲ್ಲಿ ಅಂತರ್ಗತವಾಗಿ ಅನುಸಂಧಾನಗೊಂಡಿರುವುದನ್ನು ಸಮನ್ವಯ ಸಮದರ್ಶಿತ್ವ ಭಾವದಿಂದ ಅನಾವರಣ ಮಾಡಿದ್ದಾರೆ. ಸ್ವಾನುಭವ ಸತ್ಯಾವಲೋಕನದ ಸ್ವತಃ ಸಿದ್ಧತೆಯನ್ನು ಜ್ಞಾಪಿಸಿದ್ದಾರೆ.

ಇದೊಂದು ವಿಭಿನ್ನ ನಿರಾತಂಕ ಪ್ರಾಮಾಣಿಕ ಅನುವಾದ. ಕನ್ನಡ ಬಲ್ಲ ಪ್ರತಿಯೊಬ್ಬ ಸಾಯಿಭಕ್ತರೂ ಇದನ್ನು ಓದಿ ಸಾಯಿಬಾಬಾರವರ ಸಂಪೂರ್ಣ ಅನುಗ್ರಹಕ್ಕೆ ಪಾತ್ರರಾಗುತ್ತಾರೆ.

– ಡಾ. ವಿಜಯ್‌ಕುಮಾರ್

# ವಿದ್ವಾನ್ ವೀಣೆ ಸುಬ್ಬಯ್ಯ

## (ವೀಣಾ ವಾದಕರು)



1854 ರಲ್ಲಿ ಪ್ರಖ್ಯಾತ ಸಂಗೀತಗಾರರಾಗಿದ್ದ ದೊಡ್ಡ ಶೇಷಣ್ಣನವರ ಹಿರಿಯ ಪುತ್ರರೇ ವೀಣೆ ಸುಬ್ಬಣ್ಣನವರು. ತಂದೆಯವರಿಂದಲೇ ಮೊದಲ ಪಾಠ - ಪ್ರವಚನಗಳು. ಹುಟ್ಟಿನಿಂದಲೇ ಶ್ರೀಮಂತರಾಗಿದ್ದ ಶ್ರೀಯುತರು ಸಂಗೀತ ಅಭ್ಯಾಸದ ಜೊತೆ ಯಲ್ಲಿಯೇ 'ಮೈಸೂರಿನ ರಾಯಲ್ ಸ್ಕೂಲ್'ನಲ್ಲಿ ವಿದ್ಯಾಭ್ಯಾಸ. ಅರಸು ಮನೆತನದವರ ಒಡನಾಟ. ವೀಣಾವಾದನದ ಜೊತೆಯಲ್ಲಿಯೇ ಮೈಸೂರು ಸದಾಶಿವರಾಯರಿಂದ ಗಾಯನ ಪಾಠ. ಒಡನಾಡಿ ಶೇಷಣ್ಣ ನವರು. ಸದಾಶಿವರಾದರೂ ಸಾಮಾನ್ಯರಲ್ಲ. ತ್ಯಾಗರಾಜರ ಪ್ರಶಿಷ್ಯರು. ಸ್ವಭಾವತಃ ಉತ್ತಮ ಸಾಧಕರಾದ ಸುಬ್ಬಣ್ಣನವರಿಂದ ವಾದನ - ಗಾಯನ ಇವೆರಡರಲ್ಲೂ ಪ್ರಭುತ್ವ ಗಳಿಸಲು ಸಾಧ್ಯವಾಯಿತು. ಮೈಸೂರಿನ ಮಹಾರಾಜರಾಗಿದ್ದ ಜಯಚಾಮರಾಜ ಒಡೆಯರ್‌ರವರು ಉತ್ತಮ ಕಲಾರಾಧಕರು. ಅಲದೇ ಸ್ವತಃ ಕಲಾವಿದರು. ಮಹಾರಾಜರ ಪಿಟೀಲು ವಾದನ, ಶೇಷಣ್ಣವರ ವೀಣೆ, ಸುಬ್ಬಣ್ಣನವರ ಗಾಯನ ಅಪೂರ್ವ ಶೋಭೆಯಿಂದ ಪ್ರದರ್ಶಿಸಲ್ಪಡುತ್ತಿತ್ತು. ಆಗರ್ಭ ಶ್ರೀಮಂತರಾಗಿದ್ದ ಸುಬ್ಬಣ್ಣನವರು ಕಲಾಶ್ರೀಮಂತಿಕೆಯ ಜೊತೆಗೆ ಹೃದಯ ಶ್ರೀಮಂತಿಕೆಯನ್ನೂ ಹೊಂದಿದ್ದರು. ಅನೇಕ ಹೊರನಾಡ ವಿದ್ವಾಂಸರಿಗೆ ಇವರಿಂದ ಸನ್ಮಾನಗಳು ನಡೆದಿವೆ. ಅದರಲ್ಲಿ ಮಹಾವೈದ್ಯನಾಥ ಅಯ್ಯರ್ ಪ್ರಮುಖರು.

ಇಂತಹ ಉದಾರಿಯಾದ ಕಲಾವಿದನಿಗೆ ಸಂತಾನವಿಲ್ಲದಿದ್ದರೂ ಶಿಷ್ಯರನ್ನೇ ಮಕ್ಕಳಂತೆ ಪ್ರೀತಿಸುತ್ತಿದ್ದರು. ಇವರಿಂದ ಶಿಕ್ಷಣ ಪಡೆದವರಲ್ಲಿ ಚಿಕ್ಕರಾಮರಾಯರು, ಬೆಳಕವಾಡಿ ಶ್ರೀನಿವಾಸ ಅಯ್ಯಂಗಾರ್, ಸ್ವರಮೂರ್ತಿ ವಿ.ಎನ್. ರಾವ್ ಪ್ರಮುಖರು. ಮತ್ತೆ ಅನೇಕರಿಗೆ ಪ್ರತ್ಯಕ್ಷವಾಗಿ, ಪರೋಕ್ಷವಾಗಿ ಮಾರ್ಗದರ್ಶಕರಾಗಿದ್ದರು.

ಅವರ ಹೃದಯ ಶ್ರೀಮಂತಿಕೆಗೆ ಮತ್ತೊಂದು ಉದಾಹರಣೆ, ಅವರೆಷ್ಟೇ ದೊಡ್ಡ ಕಲಾವಿದರಾಗಿದ್ದಾಗ್ಯೂ ಚಿಕ್ಕವರ ಕಛೇರಿಯನ್ನು ಕುಳಿತು ಕೇಳಿ ಆನಂದಿಸುವ ಹಿರಿಯತನ ಅವರಲ್ಲಿತ್ತು.

ಹುಟ್ಟಿದವರೆಲ್ಲಾ ಸಾಯಲೇ ಬೇಕು. ಆದರೆ, 1939ನೇ ಇಸವಿ ಜುಲೈ ತಿಂಗಳ ದಿನಾಂಕ 13ರಂದು (ಪ್ರಮಾದಿ ಸಂವತ್ಸರ ಆಷಾಢ ಬಹುಳ ಏಕಾದಶಿ) ಅವರು ಅಗಲಿದಾಗ ಸಂಗೀತ ಸಾಧಕರ ಸಂಖ್ಯೆ ಕುಂಠಿತವಾಯಿತು.

ಕೃಪೆ - ಕರ್ನಾಟಕ ಸಂಗೀತ ಕ್ಷೇತ್ರದ ನಾಡ ಕಣ್ಮಣಿಗಳು
ಸಂ. - ಪ್ರೊ. ಮೈಸೂರು ವಿ. ಸುಬ್ರಹ್ಮಣ್ಯ

# ಮನಸಿದ್ದರೆ ಮಾರ್ಗ

ಮನುಷ್ಯ ಅಂದ ಮೇಲೆ ಅವನಿಗೆ ಹವ್ಯಾಸ ಎನ್ನುವುದು ಇದ್ದೇ ಇರುತ್ತದೆ. ಹವ್ಯಾಸ ಅಂದ ಮೇಲೆ ಸಾಧಾರಣವಾಗಿ ಅದು ಒಳ್ಳೆಯ ಹವ್ಯಾಸವಾಗಿರುತ್ತದೆ. ಆ ಹವ್ಯಾಸಗಳು ಜೀವನಕ್ಕೆ ಹೊಸ ಚೇತನವನ್ನು, ಜೀವನೋಲ್ಲಾಸವನ್ನು ತಂದು ಕೊಡುತ್ತದೆ. ಆದರೆ ನಮ್ಮಲ್ಲಿ ಕೆಲವು ಚಟಗಳಿರುತ್ತವೆ. ಈ ಚಟ ಅನ್ನೋದು ಹೆಚ್ಚಾಗಿ ಬಹಳ ಕೆಟ್ಟದ್ದೇ ಆಗಿರುತ್ತದೆ. ಸುಖಿ ಮಾನವ ಫ್ಯಾಶನ್‌ಗಾಗಿ ಆರಂಭಿಸುವ ಈ ಚಟಗಳು ಮುಂದೆ ಅವನನ್ನೇ ದಾಸನನ್ನಾಗಿ ಮಾಡಿಬಿಡುತ್ತವೆ. ಆತನ ಜೀವನದ ಉತ್ಸಾಹ, ಉಲ್ಲಾಸಗಳು ಅವನಿಂದ ದೂರವಾಗುತ್ತವೆ. ಅದು ಮಧ್ಯಪಾನ ಸೇವನೆಯಾಗಿರಬಹುದು, ಧೂಮಪಾನವಾಗಿರಬಹುದು, ಗಾಂಜಾ, ಅಫೀಮು ಸೇವನೆಯಾಗಿರಬಹುದು. ಒಮ್ಮೆ ಈ ದುರಭ್ಯಾಸವನ್ನು ನಮ್ಮದಾಗಿಸಿಕೊಂಡೆವೆಂದರೆ ಆಮೇಲೆ ಅದನ್ನು ಬಿಡುವುದು ಬಹಳ ಕಷ್ಟ. ನಾನಿಂದು ನನ್ನ ಜೀವನದ ಅನುಭವದ ಮೇಲೆ ಮಧ್ಯ ವರ್ಜನೆಯ ಬಗ್ಗೆ ತಮ್ಮಲ್ಲಿ ಕೆಲವು ವಿಷಯಗಳನ್ನು ಹಂಚಿಕೊಳ್ಳಬೇಕೆಂದಿದ್ದೇನೆ.

**"I thankful to all those who said no to me its because of them I did it myself.** ಐನ್‌ಸ್ಟೀನ್ ಹೇಳಿದ ಈ ಮಾತು ನನಗೆ ಈ ಸಂದರ್ಭದಲ್ಲಿ ನೆನಪಾಗುತ್ತದೆ. ಯಾಕೆಂದರೆ ತನ್ನ ಕಷ್ಟದ ಸಮಯದಲ್ಲಿ ಯಾರೂ ಸಹಾಯ ಮಾಡದೇ ಇದ್ದಾಗ ಅವನು ತನ್ನ ಮನಸ್ಸಿನ ದೃಢತೆಯಿಂದ ಏನು ಸಾಧಿಸಿದ್ದಾನೋ ಬಹುಶ: ಅವನಿಗೆ ಬೇರೆ ಯಾರಾದರೂ ಸಹಾಯ ಮಾಡುತ್ತಿದ್ದರೆ ಅವನು ಈ ಮಟ್ಟಕ್ಕೆ ಏರುತ್ತಿರಲಿಲ್ಲವೋ ಏನೋ. ನಾನೇನೂ ಐನ್‌ಸ್ಟೀನೂ ಅಲ್ಲ, ವಿಜ್ಞಾನಿಯೂ ಅಲ್ಲ, ಯಾವ ಮೇಧಾವಿಯೂ ಅಲ್ಲ. ಸಾಮಾನ್ಯ ಮನುಷ್ಯನಾಗಿ ಅನುಭವದ ಹಿನ್ನೆಲೆಯಲ್ಲಿ ಈ ವಿಷಯವನ್ನು ಹಂಚಿಕೊಳ್ಳುತ್ತಿದ್ದೇನೆ.

ನಾನು ಐನ್‌ಸ್ಟೀನ್‌ನ ಉದಾಹರಣೆಯನ್ನು ಯಾಕೆ ನೀಡಿದ್ದೇನೆ ಅಂದರೆ ನಾವು ಕೂಡಾ ನಮ್ಮ ಜೀವನವನ್ನು ನಿರೂಪಿಸಿಕೊಳ್ಳಬೇಕು. ನಮ್ಮ ಜೀವನದ ರೂವಾರಿಗಳು ನಾವೇ ಹೊರತು ಬೇರೆ ಯಾರನ್ನೂ ಕಾಯುವುದಕ್ಕಾಗುವುದಿಲ್ಲ. ಅದಕ್ಕಾಗಿ ನಮ್ಮ ಮನಸ್ಸಿನಲ್ಲಿ ದೃಢ ನಿರ್ಧಾರವನ್ನು ಮಾಡಿಕೊಳ್ಳಬೇಕು. ಕೆಲವೊಮ್ಮೆ ನಾವು ಯೋಚಿಸುವುದಿದೆ ನಾನು ಹೀಗೆ ಮಾಡದಿದ್ದರೆ...?, ನಾನು ಕುಡಿಯದಿದ್ದರೆ...? ನಾನು ಸಿಗರೇಟು ಸೇದದೇ ಇದ್ದರೆ...? ಈ ರೀತಿಯ ಆತ್ಮಾವಲೋಕನ ಮಾಡಿಕೊಳ್ಳುತ್ತೇವೆ. ಆಗ ಒಮ್ಮೊಮ್ಮೊ ಪಶ್ಚಾತ್ತಪವೂ ನಮ್ಮನ್ನು ಕಾಡುವುದಿದೆ.

ಬಂಧುಗಳೆ, ತಪ್ಪು ಮನುಷ್ಯನಿಂದ ಆಗೇ ಆಗುತ್ತದೆ. ನಾವು ಬಾಲ್ಯದಲ್ಲಿ ಮಾಡುವ ತಪ್ಪುಗಳಿಗಿಂತ ನಮ್ಮ ಕಾಲೇಜಿನ ಜೀವನದಲ್ಲಿನ ಪುಂಡಾಟಿಕೆಗಳಿಂದಲೇ ನಾವು ಹೆಚ್ಚಾಗಿ ತಪ್ಪು ದಾರಿಯನ್ನು ತುಳಿಯುತ್ತೇವೆ. ವಿನಾ ಕಾರಣ ತರಗತಿ ಬಂಕ್ ಮಾಡುವುದು, ಸ್ನೇಹಿತರೊಂದಿಗೆ ಹರಟೆ, ಬಾರ್, ಪಬ್ ಗಳಿಗೆ ಭೇಟಿ, ಏನೋ ಹೊಸತನ್ನು ಪ್ರಯತ್ನಿಸುವ ಹುಚ್ಚು ಇವುಗಳಿಗೆ ಹೆಚ್ಚು ಗಮನ ಹರಿಸುತ್ತೇವೆಯೇ ಹೊರತು ಜೀವನಕ್ಕೆ ಹೊಸ ದಾರಿಯನ್ನು ತೋರಬಲ್ಲ ವಿದ್ಯೆಯ ಕಡೆಗೆ ನಮ್ಮ ಗಮನ, ಒಲವು ಕಡಿಮೆಯಾಗುತ್ತಾ ಹೋಗುತ್ತದೆ. ನಮಗಿರುವ ಸೌಲಭ್ಯಗಳ

ಮಿತಿಯಲ್ಲಿ ಸಂತೃಪ್ತಿಯ ಜೀವನ ನಡೆಸಿದಾಗ ಬಾಳು ಭವ್ಯವಾಗುತ್ತದೆ. ಮಾನವನ ಆಸೆಗಳಿಗೆ ಮಿತಿಯೇ ಇಲ್ಲ. ಅವು ಅನಂತವಾಗಿ, ನಿರಂತರವಾಗಿ ನಾವು ಅದನ್ನು ಬೆಳೆಸಿಕೊಂಡು ಹೋದಂತೆ ನಿರಾತಂಕವಾಗಿ ನಮ್ಮೊಂದಿಗೆ ಇರುತ್ತವೆ. ಅದಕ್ಕೆ ಕಡಿವಾಣ ಹಾಕಬೇಕಾದವರು ನಾವೇ. ಹುಚ್ಚು ಮನಸ್ಸಿನ ಹಲವಾರು ಮುಖಗಳು ನಮ್ಮನ್ನು ದಾರಿ ತಪ್ಪಿಸಲು ಪ್ರಯತ್ನಿಸುತ್ತಿರುತ್ತವೆ. ಅವುಗಳ ಬೆನ್ನು ಹತ್ತಿದರೆ ಅತ್ಯಂತ ಹೀನಾಯವಾದ ಮತ್ತು ಎಲ್ಲರಿಂದಲೂ ತುಚ್ಛೀಕರಿಸಲ್ಪಟ್ಟ ಬದುಕನ್ನು ನಾವು ಬಾಳಬೇಕಾಗುತ್ತದೆ. ಎಲ್ಲಿಯೂ ನಮಗೆ ಗೌರವ ಸಿಗುವುದಿಲ್ಲ. ಯಾರಿಂದಲೂ ಪ್ರೀತಿ ದೊರೆಯುವುದಿಲ್ಲ.



✍ ಸುರೇಶ್ ಮಡಿಕೇರಿ

ನಾವು ಗೊತ್ತಿದ್ದೋ ಗೊತ್ತಿಲ್ಲದೆಯೋ ಅಂದು ಕಲಿತ ವ್ಯಸನಗಳಿಂದ ಮುಕ್ತಿ ಸಿಗುವುದಿಲ್ಲವೇ? ಎನ್ನುವುದು ನಮ್ಮೆದುರಿಗೆ ಇರುವ ಪ್ರಶ್ನೆ. ಸಾಧ್ಯವಿದೆ. ಆದರೆ ನಮ್ಮ ಮನಸ್ಸಿನಲ್ಲಿ ದೃಢತೆ ಇರಬೇಕು. ಅದರ ಬಗ್ಗೆ ಚಿಂತಿಸಬೇಕು. ಆ ಚಿಂತನ ಮಂಥನದಿಂದ ನಮಗೆ ದುಶ್ಚಟಗಳ ಒಳಿತು ಕೆಡುಕುಗಳ ಬಗ್ಗೆ ಸ್ಪಷ್ಟ ಚಿತ್ರಣ ನಮ್ಮೆದುರು ಮೂಡಿ ಬರುತ್ತದೆ. ಕೆಲವರು ದುಶ್ಚಟಗಳಿಂದ ಹೊರಬರುವ ಇಚ್ಛೆಯುಳ್ಳವರಾಗಿರುತ್ತಾರೆ. ಆದರೆ ಆ ಚಟದಿಂದ ಹೊರಬರುವುದು ಅವರಿಗೆ ಅಷ್ಟು ಸುಲಭ ಸಾಧ್ಯವಾಗುವುದಿಲ್ಲ. ಮಧ್ಯವ್ಯಸನದತ್ತ ನಮ್ಮ ದೃಷ್ಟಿ ಹರಿಸಿದಾಗ ಕುಡಿಯುವುದು ಮತ್ತು ಕುಡಿಸುವುದು ಎರಡೂ ತಪ್ಪು. ಮಧ್ಯ ಎನ್ನುವುದು ವಿಷ. ಒಂದು ನಾವು ಹಾಳಾಗುವುದು ಮಾತ್ರವಲ್ಲ ಇತರರ ಬಂಗಾರದಂತಹ ಜೀವನವನ್ನು ನಮ್ಮ ಕೈಯ್ಯಾರೆ ಹಾಳುಮಾಡುತ್ತೇವೆ. ಅದೇ ರೀತಿ ಇತರ

ವ್ಯಸನವೂ ಹಾಗೆ ನಾವು ಅದರ ದಾಸರಾಗುವುದು ಮಾತ್ರವಲ್ಲದೆ ನಮ್ಮ ಸ್ನೇಹಿತರನ್ನೂ ದಾಸರನಾಗಿಸುತ್ತೇವೆ. ಇದು ಎಷ್ಟರ ಮಟ್ಟಿಗೆ ಸರಿ ಎಂಬ ಯೋಚನೆಯನ್ನು ನಾವು ಮಾಡಿಕೊಳ್ಳಬೇಕು.

ಮಧ್ಯ ನಿರೋಧ ಮಾಡುವಲ್ಲಿ ಅಹರ್ನಿಶಿ ಹೋರಾಟ ನಡೆಯುತ್ತಲೇ ಇರುತ್ತದೆ. ಆದರೆ ಇದರಿಂದ ಯಾವ ಪ್ರಯೋಜನವೂ ಆಗುತ್ತಿಲ್ಲ. ಯಾಕೆಂದರೆ ಕುಡಿಯುವವನು ಹೇಗಾದರೂ ಮಾಡಿ ಕುಡಿಯುತ್ತಾನೆ. ನಾನು ಹೇಳುವುದೇನೆಂದರೆ ಮಧ್ಯ ನಿರೋಧಕ್ಕಿಂತ ಮಧ್ಯ ವರ್ಜನೆಗೆ ನಾವು ಹೆಚ್ಚು ಒತ್ತುಕೊಡಬೇಕು. ಅವನು ತನ್ನ ಮನಸ್ಸಿನಲ್ಲಿ ತಂದುಕೊಂಡು ಸ್ವತ: ಇಚ್ಛೆಯಿಂದ ಅದನ್ನು ವರ್ಜಿಸುವ ಪ್ರಯತ್ನ ಮಾಡಬೇಕು. ಮಧ್ಯಪಾನದಿಂದ ಸಮಾಜಕ್ಕೆ, ಅವನ ಪರಿವಾರಕ್ಕೆ, ಅವನನ್ನೇ ನಂಬಿ ಬದುಕುತ್ತಿರುವ ಅವನ ಮಡದಿ ಮಕ್ಕಳಿಗೆ ಆಗುವ ನೋವು, ತೊಂದರೆಗಳನ್ನು ಅವನಿಗೆ ಮನದಟ್ಟಾಗುವಂತೆ ತಿಳಿಹೇಳಬೇಕು. ಆತ ಯಾವುದೇ ಒತ್ತಡವಿಲ್ಲದೆ ಸ್ವಯಂ ಇಚ್ಛೆಯಿಂದ ಮಧ್ಯವರ್ಜನೆಯನ್ನು ಮಾಡುವ, ಮಾಡಿಸುವ ಪ್ರಯತ್ನ ನಮ್ಮದಾಗಬೇಕು. ಹಾಳಾಗುವ ಜೀವಕ್ಕೆ ಸಾಂತ್ವನ ನೀಡಿ ಸುಂದರ ಜೀವನವನ್ನು ನೀಡಿದ ಭಾಗ್ಯವಂತರು ನಾವಾಗಬಹುದಲ್ಲವೇ? ಆದರೆ ಅದಕ್ಕೆ ಆ ವ್ಯಸನಿ ತನಗಾಗುವ ತೊಂದರೆಗಳನ್ನು ಅರ್ಥೈಸಿಕೊಳ್ಳಬೇಕು.. ನನ್ನ ಸ್ನೇಹಿತನೊಬ್ಬ ಇದಕ್ಕೆ ಜೀವಂತ ಉದಾಹರಣೆ. ಆತ ವಿಪರೀತ ಕುಡಿಯುತ್ತಿದ್ದ. ಮಧ್ಯವಿಲ್ಲದ ಅವನ ದಿನವನ್ನು ಕಲ್ಪಿಸುವುದೂ ಸಾಧ್ಯವಿಲ್ಲ. ಅಂತಹ ವ್ಯಕ್ತಿ ತನ್ನವರಿಗಾಗಿ, ತನ್ನ ಪ್ರೀತಿ ಪಾತ್ರರಿಗಾಗಿ ಆ ವ್ಯಸನದಿಂದ ಹೊರಬಂದು ಸುಮಾರು 3 ವರ್ಷಗಳೇ ಕಳೆಯಿತು. ಹಾಗಿದ್ದರೆ ಮನಸ್ಸಿದ್ದರೆ ಮಾರ್ಗ ಅಲ್ಲವೇ ಸ್ನೇಹಿತರೆ? ಪ್ರಯತ್ನಕ್ಕೆ ಮೀರಿದ್ದು ಯಾವುದೂ ಇಲ್ಲ. ಆದರೆ ನಮ್ಮಲ್ಲಿ ದೃಢ ನಿಶ್ಚಯವಿರಬೇಕು. ನಾವೆಲ್ಲರೂ ಮನಸ್ಸು ಮಾಡಿದರೆ ದುಶ್ಚಟಗಳಿಂದ ಹೊರಬಂದು ನಮ್ಮ ಬಾಳನ್ನು ಬಂಗಾರವಾಗಿಸಬಹುದು. ನಮ್ಮ ಜೀವವನ್ನೇ ಹಿಂಡಿ ಹಿಪ್ಪೆ ಮಾಡುವ ಆ ದುರಭ್ಯಾಸಗಳಿಂದ ಹೊರಬಂದು ಅದಕ್ಕಿಂತ ಸುಂದರ ಜಗತ್ತು ನಮ್ಮೆದುರಿಗಿದೆ. ಅದನ್ನು ಅನುಭವಿಸಿದಾಗ ನಮ್ಮಷ್ಟು ಸುಖಿಗಳು ಈ ಜಗತ್ತಿನಲ್ಲಿ ಯಾರೂ ಇಲ್ಲ ಎನ್ನುವ ಅನುಭವವಾಗುವುದರಲ್ಲಿ ಎರಡು ಮಾತಿಲ್ಲ.

## ಮುಂಬಯಿ ಕನ್ನಡ ಸಂಘದಲ್ಲಿ ಕನ್ನಡ ಸರ್ಟಿಫಿಕೇಟ್ ಕೋರ್ಸ್‌ನ ಉದ್ಘಾಟನೆ




ಮುಂಬೈ ಮಾಟುಂಗಾ ಪೂರ್ವದ ಮುಂಬೈ ಕನ್ನಡ ಸಂಘದ ಆಶ್ರಯದಲ್ಲಿ ತಾರೀಕು **20-07-2014** ರಂದು ಸಂಘದ ವಾಚನಾಲಯದಲ್ಲಿ ಕನ್ನಡ ಸರ್ಟಿಫಿಕೇಟ್ ಕೋರ್ಸ್‌ನ ಉದ್ಘಾಟನೆ ನಡೆಯಿತು. ಇದರ ಉದ್ಘಾಟನೆಯನ್ನು ಪತ್ರಕರ್ತ ಹಾಗೂ ಅಕ್ಷಯ ಮಾಸಿಕ ಪತ್ರಿಕೆಯ ಸಂಪಾದಕರಾದ ಡಾ. ಈಶ್ವರ ಅಲೆವೂರ್‌ರವರು ಮಾಡಿದರು.

ಆರಂಭದಲ್ಲಿ ಎಸ್.ಕೆ. ಪದ್ಮನಾಭರವರ ಪ್ರಾರ್ಥನೆಯೊಂದಿಗೆ ಕಾರ್ಯಕ್ರಮ ಆರಂಭವಾಯಿತು. ನಂತರ ಸಂಘದ ಅಧ್ಯಕ್ಷರಾದ ಜಿ.ಎಸ್. ನಾಯಕರು ಸಂಘವು ಕಳೆದ **78** ವರ್ಷಗಳಿಂದ ಮುಂಬೈ ಮಹಾನಗರದಲ್ಲಿ ನಡೆಸುತ್ತಿರುವ ಕನ್ನಡ ಸಾಹಿತ್ಯ, ಸಾಂಸ್ಕೃತಿಕ ಮತ್ತು ಧಾರ್ಮಿಕ ಕಾರ್ಯಕ್ರಮಗಳ ಬಗ್ಗೆ ಸಂಕ್ಷಿಪ್ತವಾಗಿ ತಿಳಿಸಿದರು.

ಕಳೆದ **15** ವರುಷಗಳಿಂದ ಸಂಘವು ಕನ್ನಡ ಸರ್ಟಿಫಿಕೇಟ್ ಕೋರ್ಸ್‌ನ್ನು ಯಶಸ್ವಿಯಾಗಿ ನಡೆಸುತ್ತಾ ಬಂದಿದೆ. ಇದರಲ್ಲಿ ಕನ್ನಡಿಗರಲ್ಲದ ಕನ್ನಡೇತರರಾದ ಮರಾಠಿ, ಗುಜರಾತಿ, ಸಿಂಧಿ, ಪಂಜಾಬಿ ಮತ್ತು ಹಿಂದಿ ಭಾಷೆ ಮಾತನಾಡುವ ಅಲ್ಲದೆ, ಮಳೆಯಾಳಿ, ತೆಲುಗು, ತಮಿಳು ಮಾತನಾಡುವ ಜನರು ಉತ್ಸಾಹದಿಂದ ಭಾಗವಹಿಸುತ್ತಾ ಇದ್ದಾರೆ ಎಂದು ತಿಳಿಸಿದರು. ಅಲ್ಲದೆ, ಈ ಕೋರ್ಸ್‌ನ ಉದ್ಘಾಟಕರಾಗಿ ಬಂದ ಡಾ. ಈಶ್ವರ ಅಲೆವೂರರನ್ನು, ವಿದ್ಯಾರ್ಥಿಗಳನ್ನು ಮತ್ತು ನೆರೆದಿರುವ ಸಭಿಕರೆಲ್ಲರನ್ನು ಹಾರ್ದಿಕವಾಗಿ ಸ್ವಾಗತಿಸಿದರು.

ಉದ್ಘಾಟಕರಾಗಿ ಬಂದ ಡಾ. ಈಶ್ವರ ಅಲೆವೂರ್‌ರವರ ಪರಿಚಯವನ್ನು ಸಂಘದ ಸದಸ್ಯರಾದ ಶ್ರೀ ಸತೀಶ್ ಎನ್. ಬಂಗೇರರು ಮಾಡಿದರು. ಡಾ. ಈಶ್ವರ ಅಲೆವೂರ್‌ರವರಿಗೆ ಸಂಘದ ಅಧ್ಯಕ್ಷರಾದ ಜಿ.ಎಸ್. ನಾಯಕರು ಪುಷ್ಪಗುಚ್ಛ, ಸ್ಮರಣಿಕೆ ನೀಡಿ ಗೌರವಿಸಿದರು. ಡಾ. ಈಶ್ವರ ಅಲೆವೂರ್‌ರವರು ದೀಪ ಪ್ರಜ್ವಲನೆ ಮಾಡಿ ಕೋರ್ಸ್‌ನ ಉದ್ಘಾಟನೆ ಮಾಡಿದರು. ತಮ್ಮ ಉದ್ಘಾಟನಾ ಭಾಷಣದಲ್ಲಿ ಈ ಕೆಳಗಿನಂತೆ ತಮ್ಮ ಅನಿಸಿಕೆಗಳನ್ನು ವ್ಯಕ್ತಪಡಿಸಿದರು.

ಮುಂಬೈ ಕನ್ನಡ ಸಂಘವು ಕನ್ನಡ ಭಾಷೆ ಮತ್ತು ಸಂಸ್ಕೃತಿಯನ್ನು ಉಳಿಸಲು ಶ್ರಮಿಸುತ್ತಿರುವುದು ಅಭಿನಂದನಾರ್ಹವಾಗಿದೆ. ಮುಂಬೈ ಕನ್ನಡ ಸಂಘ ಆಯೋಜಿಸುತ್ತಿರುವ ಕನ್ನಡ ಕಲಿಕಾ ತರಗತಿಗಳು ತುಂಬಾ ಅರ್ಥಪೂರ್ಣವಾಗಿವೆ. ಆ ಮೂಲಕ ನಾಡು ನುಡಿ, ಸೊಬಗನ್ನು ಹೊರನಾಡಿನವರಿಗೆ ಪರಿಚಯಿಸುತ್ತಿರುವುದು ಶ್ಲಾಘನೀಯ ಎಂದು ತಿಳಿಸಿ, ಸಂಘಕ್ಕೆ ಅಭಿನಂದನೆಗಳನ್ನು ತಿಳಿಸಿದರು. ಕಲಿಕಾ ವರ್ಗದ ಶಿಕ್ಷಕಿ ಶ್ರೀಮತಿ ಲಕ್ಷ್ಮೀ ಸುಧೀಂದ್ರರು ವಿದ್ಯಾರ್ಥಿಗಳಿಗೆ ಹಿತವಚನ ನೀಡಿದರು. ಸಂಘದ ಗೌರವ ಕೋಶಾಧಿಕಾರಿ ರಾಜೇಂದ್ರ ಗಡಿಯಾರ್ ಪರೀಕ್ಷೆಯಲ್ಲಿ ತೇರ್ಗಡೆಯಾದವರ ಹೆಸರನ್ನು ಓದಿಹೇಳಿದರು. ಸೋಮನಾಥ ಕರ್ಕೇರ ಕಾರ್ಯಕ್ರಮ ನಿರ್ವಹಣೆ ಮಾಡಿದರು. ರಜನಿ ವಿ.ಪೈ. ಧನ್ಯವಾದ ಕಾರ್ಯಕ್ರಮ ನಿರ್ವಹಣೆ ಮಾಡಿದರು. ಸಂಧ್ಯಾ ಪ್ರಭು ಉಪಹಾರದ ವ್ಯವಸ್ಥೆ ಮಾಡಿ ಸಹಕರಿಸಿದರು.

**ಕರ್ನಾಟಕ ಸಂಘ ಮುಂಬಯಿ : 'ಗೀತೋಪದೇಶ' ಯಕ್ಷಗಾನ ತಾಳಮದ್ದಳೆ**

## ಮುಂಬಯಿ ಕನ್ನಡಿಗರ ನಾಡುನುಡಿ ಪ್ರೇಮ ಅಭಿನಂದನೀಯ - ಪಿಚ್ಚಳ್ಳಿ ಶ್ರೀನಿವಾಸ್

ಮುಂಬಯಿ ಕನ್ನಡಿಗರ ಜೊತೆಗೆ ಮುಖಾಮುಖಿಯಾಗಲು ನನಗೆ ಸಂತೋಷವಾಗುತ್ತಿರುವುದು ಇಲ್ಲಿನ ಕನ್ನಡಿಗರ ನಾಡು ನುಡಿ ಸಂಸ್ಕೃತಿ ಪ್ರೇಮದಿಂದ. ಕನ್ನಡ ನಾಡನ್ನು ಬಿಟ್ಟು ದೂರದಲ್ಲಿರುವ ಮುಂಬಯಿಯಲ್ಲೂ ಕನ್ನಡದ ಕಂಪನ್ನು ಕಾಣಿಸುತ್ತಿರುವ ಇಲ್ಲಿನ ಕನ್ನಡಿಗರನ್ನು ನಾನು ಮನಪೂರ್ವಕ ಅಭಿನಂದಿಸುತ್ತೇನೆ ಎಂದು ಕರ್ನಾಟಕ ಜಾನಪದ ಅಕಾಡೆಮಿ ಇದರ ಅಧ್ಯಕ್ಷರಾದ ಪಿಚ್ಚಳ್ಳಿ ಶ್ರೀನಿವಾಸ ಅಭಿಮಾನದಿಂದ ನುಡಿದರು.

ಸುವರ್ಣ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಕರ್ನಾಟಕ ಸಂಘ ಮುಂಬಯಿ ವತಿಯಿಂದ ಜುಲೈ **16** ರಂದು ಸಂಜೆ ಸಮರಸ ಭವನದಲ್ಲಿ ಅಜೆಕಾರು ಕಲಾಭಿಮಾನಿ ಬಳಗ, ಮುಂಬಯಿ (ರಿ) ಇವರು ಊರಿನ ಪ್ರಸಿದ್ಧ ಕಲಾವಿದರಿಂದ ಪ್ರಸ್ತುತಪಡಿಸಿದ 'ಗೀತೋಪದೇಶ' ಯಕ್ಷಗಾನ ತಾಳಮದ್ದಳೆ ಸಭಾಕಾರ್ಯಕ್ರಮದಲ್ಲಿ ಅವರು ವಿಶೇಷ ಅತಿಥಿಯಾಗಿ ಉಪಸ್ಥಿತರಿದ್ದು ಮಾತನಾಡಿದರು.

ಹೊರನಾಡಿನಲ್ಲಿ ಕನ್ನಡ ಮಾತು ಕಿವಿಗೆ ಬಿದ್ದ ತಕ್ಷಣ ಅತೀವ ಸಂತೋಷವಾಗುವುದು ಎಂದ ಪಿಚ್ಚಳ್ಳಿ ಅವರು, ಕನ್ನಡ ಸಂಸ್ಕೃತಿ ಪರಂಪರೆ, ನೃತ್ಯ ಮುಂತಾದ ಕಲೆಗಳನ್ನು ಉಳಿಸಲು ಕರ್ನಾಟಕ ಸರಕಾರ ಸುಮಾರು **300** ಕೋಟಿ ರೂಪಾಯಿ ವ್ಯಯಿಸುತ್ತಿದೆ. ಅದು ಹನ್ನೆರಡು ಅಕಾಡೆಮಿಗಳ ಮೂಲಕ ಕಾರ್ಯವೆಸುಗುತ್ತಿದೆ ಎಂದ ಅವರು, ಕರ್ನಾಟಕ ಜಾನಪದ ಅಕೆಡೆಮಿಯ ಅಧ್ಯಕ್ಷನಾಗಿ ತಾನು ಕನ್ನಡ ನಾಡು-ನುಡಿ-ಸಂಸ್ಕೃತಿಯನ್ನು ಬೆಳೆಸುವಲ್ಲಿ ಕೆಲಸ ಮಾಡುತ್ತಾ ಇದ್ದೇನೆ ಎಂದರು. ಕರ್ನಾಟಕ ಜಾನಪದ ಅಕಾಡೆಮಿ ರಿಜಿಸ್ಟ್ರಾರ್ ಪರಡ್ಡಿ ಅವರು ಗೌರವ ಅತಿಥಿಯಾ ಆಗಮಿಸಿದ್ದು, ಹೊರನಾಡಿನ ಕನ್ನಡ ಸಂಸ್ಕೃತಿಯ ಪರಿಚಯ ಮಾಡಿಕೊಳ್ಳಲು ತನಗೆ ಸಂತೋಷವಾಗುತ್ತಿದೆ ಎಂದರು. ಹೊರರಾಜ್ಯ ಕನ್ನಡಿಗರಿಗಾಗಿಯೇ ಜನಪದ ಕಲಾವಿದರನ್ನು ಕರೆತಂದು ಇಲ್ಲಿ ಕಾರ್ಯಕ್ರಮ ನೀಡಿ ಅವರ ಪ್ರತಿಭೆಗೆ ಅವಕಾಶ ನೀಡಬೇಕು. ಅದಕ್ಕಾಗಿ ಮುಂಬಯಿಯಲ್ಲಿ ಜನಪದ ಉತ್ಸವ ಹಮ್ಮಿಕೊಳ್ಳಲು ಮುಂಬಯಿಯ ಕನ್ನಡಿಗರು ಪ್ರೋತ್ಸಾಹ ನೀಡಬೇಕು. ಬಹುಭಾಷಾ ಸಂಸ್ಕೃತಿ ಹೊಂದಿರುವ ಈ ನಗರದಲ್ಲಿ ಜಾನಪದ ಉತ್ಸವವನ್ನು ಅದ್ದೂರಿಯಾಗಿ ಮಾಡಲು ನಿರ್ಧರಿಸಿದ್ದು ಇದಕ್ಕೆ ಮುಂಬಯಿ ಕನ್ನಡ ಸಂಘಸಂಸ್ಥೆಗಳ ಪ್ರೋತ್ಸಾಹ ಅಪೇಕ್ಷಿಸಿದ್ದೇವೆ ಎಂದರು. ಜಾನಪದ ವಿದ್ವಾಂಸ, ಪಾರ್ತಿಸುಬ್ಬ ಯಕ್ಷಗಾನ ಕಲಾಕ್ಷೇತ್ರದ ಸದಸ್ಯ (ಕೇರಳ)ರಾದ ಕೇಳು ಮಾಸ್ತರ್ ಅಗಲ್‌ಪಾಡಿ ಅವರು ಅತಿಥಿಯಾಗಿ ಉಪಸ್ಥಿತರಿದ್ದು ಕಲಾವಿದರನ್ನು, ಕನ್ನಡ ಕಲೆ ಸಂಸ್ಕೃತಿಯನ್ನು ಬೆಳೆಸಿ ಉಳಿಸುತ್ತಾ ಬಂದಿರುವ ಕರ್ನಾಟಕ ಸಂಘ ಮುಂಬಯಿ ಇದರ ಕಾರ್ಯ ಶ್ಲಾಘನೀಯವಾದುದು ಎಂದರು.

ಕೇರಳ ತುಳು ಅಕಾಡೆಮಿಯ ಸದಸ್ಯ ನಾನಿತ್ತಲ್ ಕೇಶವ ಪ್ರಸಾದ್, ಅಜೆಕಾರು ಬಾಲಕೃಷ್ಣ ಶೆಟ್ಟಿ ಮೊದಲಾದವರು ವೇದಿಕೆಯಲ್ಲಿ ಉಪಸ್ಥಿತರಿದ್ದರು. ಕರ್ನಾಟಕ ಸಂಘದ ಗೌ. ಕಾರ್ಯದರ್ಶಿ ಓಂದಾಸ್ ಕಣ್ಣಂಗಾರ್ ಸ್ವಾಗತಿಸಿ, ಕಾರ್ಯಕ್ರಮ ನಿರೂಪಿಸಿ, ವಂದಿಸಿದರು. ರಂಗನಿರ್ದೇಶಕ ಡಾ. ಭರತ್ ಕುಮಾರ್ ಪೊಲಿಪು, ಬಿ.ಜಿ. ನಾಯಕ್ ವೇದಿಕೆಯ ಗಣ್ಯರನ್ನು ಗೌರವಿಸಿದರು. ಈ ಸಂದರ್ಭದಲ್ಲಿ ಅಜೆಕಾರು ಕಲಾಭಿಮಾನಿ ಬಳಗ ಮುಂಬಯಿ (ರಿ) ಇದರ ಊರಿನ ಪ್ರಸಿದ್ಧ ಕಲಾವಿದರು 'ಗೀತೋಪದೇಶ' ಯಕ್ಷಗಾನ ತಾಳಮದ್ದಳೆ ಸಾದರಪಡಿಸಿದರು.

**MATRIMONIAL**

Alliance for Brahmin Smartha Boy Age 30 years, Kaushik Gotra, Simha Rashi, Magha Nakshatra, Height 5'.11", Fair complexion, B.Com Graduate working in International Global Service in Mumbai, earning Rs. 45,000/- per month. Girl wanted with service in Mumbai (Smartha or Madhava), Graduate age between (25-28 years) Height 5'.5" to 5'.8", Good looking.

Contact : Mrs. Meenakshi V. Begoor – 022-28970741 / 9892588861 / 9930466951

# ಅಮರ ರಾಮಾಯಣ

ವಿದುಷಿ ಸರೋಜಾ ಶ್ರೀನಾಥ್ ಅವರು ಬಹುಮುಖ ಪ್ರತಿಭೆಯುಳ್ಳವರು. ಸಂಗೀತ ಕ್ಷೇತ್ರದಲ್ಲಿ ಅನುಪಮ ಸೇವೆ ಸಲ್ಲಿಸಿ ಜನಪ್ರಿಯರಾದವರು. ಅವರು ರಚಿಸಿದ 'ಅಮರ ರಾಮಾಯಣ' ಕೃತಿಯು ವಿವಿಧ ನೆಲೆಗಳಲ್ಲಿ ರಾಮಾಯಣವನ್ನು ಶೋಧಿಸಿದ ಕೃತಿ. ರಾಮಾಯಣ ಅಂದರೆ ಅದು ಭಾರತೀಯ ಸಂಸ್ಕೃತಿ. ವಾಲ್ಮೀಕಿ ರಾಮಾಯಣವೇ ಆದಿಕಾವ್ಯ. ನಂತರ ಇದನ್ನು ಆಧರಿಸಿ ಹಲವಾರು ರಾಮಾಯಣ ಕೃತಿಗಳು ರಚಿತವಾದವು. ಸ್ವಾಮಿ ವಿವೇಕಾನಂದರು " ಶ್ರೀ ರಾಮಾಯಣವೇ ಭಾರತೀಯ ಸಂಸ್ಕೃತಿಯ ಭಾಷೆ, ಭಾರತೀಯರ ಸಂಪತ್ತು, ಚರಿತ್ರೆ, ನಾಗರೀಕತೆ, ಜನಜೀವನದ ಮಾನದಂಡ ಹಾಗೂ ಜೀವಾಳ" ಎಂದಿದ್ದಾರೆ.

ಆದಿಕವಿ ವಾಲ್ಮೀಕಿಯಿಂದ ಹಿಡಿದು ಕುವೆಂಪು, ಮಹಾಕವಿ, ಶ್ರೀ ವೀರಪ್ಪ ಮೊಯಿಲಿಯವರೆಗೆ ಅನೇಕ ರಾಮಭಕ್ತರು ರಾಮನ ಕಥೆಯನ್ನು ಅನೇಕ ಭಾಷೆಗಳಲ್ಲಿ ಬರೆದಿರುವರು; ಬೇರೆ ಬೇರೆ ಭಾರತೀಯ ಭಾಷೆಗಳಲ್ಲಿ, ಏಷಿಯಾದ ರಾಜ್ಯಗಳಲ್ಲಿ ವಿವಿಧ ಭಾಷೆಗಳಲ್ಲಿ ಇರುವ ರಾಮಾಯಣವನ್ನು ಇಲ್ಲಿ ಲೇಖಕಿ ಪ್ರಸ್ತುತ ಪಡಿಸಿದ್ದಾರೆ. ವೈವಿಧ್ಯಮಯ ಸನ್ನಿವೇಶ, ಭಾಷೆ, ಪಾತ್ರಚಿತ್ರಣ, ಸಾಮಾಜಿಕ ಸಂಪ್ರದಾಯ ಮುಂತಾದ ವಿವಿಧ ದೃಷ್ಟಿಕೋನಗಳಿಂದ ಮೂಲ ಕಥಾನಕವು ಅಧ್ಭುತವಾಗಿ ಮಾನವನ ಬುದ್ಧಿ, ಮನಸ್ಸು ಹಾಗೂ ಆತ್ಮವಿಶ್ವಾಸಕ್ಕೆ ಪ್ರೇರಣೆಯಾಗಿರುವುದು ನಿಜ ಸಂಗತಿ ಎಂದು ಸರೋಜಾ ಶ್ರೀನಾಥ್ ಅವರು ಹೇಳಿರುವುದರಲ್ಲಿ ನಿಜಾಂಶವಿದೆ.

ರಾಮಾಯಣ ಹಾಗೂ ಮಹಾಭಾರತ ಮಹಾಕಾವ್ಯಗಳೂ ಎಂದೆಂದಿಗೂ ಅಮರವಾದುದು. ಆ ಕಾವ್ಯಗಳ ಪಾತ್ರಗಳು ಹಿಂದಿನ, ಇಂದಿನ, ಮುಂದಿನ ಪೀಳಿಗೆಗೂ ಉತ್ತುಂಗ ಮಾರ್ಗದರ್ಶನದ ಆದರ್ಶಗಳೆಂಬುವುದು ಸತ್ಯವಾದುದು. ಅದೇ ರಾಮಾಯಣದ ಕಥೆಯನ್ನು ಆಧರಿಸಿ ಸರೋಜಾ ಶ್ರೀನಾಥ್ ಅವರು 'ಅಮರ ರಾಮಾಯಣ' ವನ್ನು ರಚಿಸಿದ್ದಾರೆ. ಈ ಕೃತಿಯ ವಿಶೇಷತೆಯೆಂದರೆ ಕನ್ನಡ ನಾಡಿನಿಂದ ಹಿಡಿದು ಹೊರದೇಶಗಳಲ್ಲಿ ರಾಮಾಯಣದ ಕಥೆ ಯಾವ ರೀತಿಯಾಗಿದೆ ಎಂಬುವುದನ್ನು ವಿಶ್ಲೇಷಿಸಿರುವುದು.

ಕನ್ನಡ ನಾಡಿನಲ್ಲಿ ರಾಮಾಯಣದ ಕುರಿತು ಅಧ್ಯಯನ ನಡೆಸಿದ ಲೇಖಕಿ " ಹಿಂದೂ ಬರಹಗಾರರು ತತ್ವಜ್ಞಾನ ಪ್ರಚಾರಕ್ಕೆ ಮುಖ್ಯತೆ ನೀಡಲು ರಾಮಾಯಣದ ಮೊರೆ ಹೊಕ್ಕರೆ, ಜೈನ ಕವಿಗಳು ಜೈನ ಧರ್ಮ ಪ್ರಚಾರಕ್ಕಾಗಿ ರಾಮಾಯಣವನ್ನು ಉಪಯೋಗಿಸಿದರು. ಕನ್ನಡ ನಾಡಿನ ಜೈನ ಕವಿಗಳು ವಿವೇಕ ಜ್ಞಾನ ಪ್ರಚಾರ ಮಾಡುವ ಸಲುವಾಗಿ ರಾಮಾಯಣ ಕಾವ್ಯಕ್ಕೆ ನವೀನ ಬಣ್ಣವನ್ನು ನೀಡಿದರು. ವಿದ್ಯಾಧರರು ಮತ್ತು ಜೈನರು ವಾನರರಾಗಿಯೂ, ರಾಕ್ಷಸರಾಗಿಯೂ ಜನಿಸಿದರೆಂದು ಎಂದು ಈ ಕೃತಿಯಲ್ಲಿ ಉಲ್ಲೇಖಿಸಲಾಗಿದೆ. ಋಷಿಗಳು, ಬ್ರಾಹ್ಮಣರು, ಯಜ್ಞಯಾಗಗಳು ಮರೆಯಾಗಿರುವುದು ಮಾತ್ರವಲ್ಲದೆ ರಾಮನು ವಿಷ್ಣುವಿನ ಅವತಾರವೂ ಅಲ್ಲ. ರಾವಣನ ವಧೆಯನ್ನೂ ಮಾಡುವುದಿಲ್ಲ; ಜನಮನ ಸೆಳೆಯುವ ಆಕರ್ಷಕ ಪದಜೋಡಣೆಗಳಿಂದ 'ರಾಮಚರಿತ ಪುರಾಣ' ದ ವ್ಯಕ್ತಿಚಿತ್ರಣ ಸೊಗಸಾಗಿ ವಾಲ್ಮೀಕಿ ನೀಡಿದ ವ್ಯಕ್ತಿ ಚಿತ್ರಣದಿಂದ ಭಿನ್ನವಾಗಿದೆ ಎಂದು ವೈದಿಕ ರಾಮಾಯಣಕ್ಕಿಂತ ಜೈನ ರಾಮಾಯಣವು ಭಿನ್ನವಾದುದು ಎಂಬುವುದನ್ನು ಲೇಖಕಿ ಆಧಾರ ಸಹಿತವಾಗಿ ವಿವರಿಸುತ್ತಾರೆ.

ಕುವೆಂಪು ಅವರ 'ಶ್ರೀ ರಾಮಾಯಣ ದರ್ಶನಂ' ನಲ್ಲಿ " ರಾವಣನನ್ನು ಕೊಲೆ ಮಾಡಲೆಂದೇ ರಾಮಾವತಾರವಲ್ಲ; ಇದರಿಂದ ಧರ್ಮವು ಉದ್ಧಾರವಾಗುವುದಿಲ್ಲ. ಮನ ಮನದಲ್ಲಿ ಅಡಗಿರುವ ರಾವಣತ್ವವನ್ನು ನಿರ್ಮೂಲನವಾದರೆ ಮಾತ್ರ ರಾವಣವಧೆಗೆ ಒಂದು ಅರ್ಥವುಂಟು; ಜನಶಕ್ತಿ ವರ್ಧನೆ ಆಗುವುದು. ಒಮ್ಮತದಿಂದ ಜನಸಮೂಹ ಬೇಡಿದರೆ ಮಾತ್ರ ಆ ಭಗವಂತನು ಅವತರಿಸುವನು" ಎಂದು ಕವಿಯ ನವೀನ ದೃಷ್ಟಿಕೋನವನ್ನು ಸರೋಜಾ ಅವರು ಭಿನ್ನವಾಗಿ ಗುರುತಿಸುತ್ತಾರೆ. ಕುವೆಂಪುರವರ ಮಂಥರೆಯಂತೂ ಮಂಥರಾ ಲಕ್ಷ್ಮಿಯಾಗಿ ತ್ಯಾಗ, ಪ್ರೇಮ, ಸಹನೆ, ಮಮತೆ, ಶ್ರದ್ಧೆ, ಅಚಲವಾದ ಪ್ರೇಮ ತುಂಬಿದ ನಿಷ್ಠೆಯಿಂದ ಆದರ್ಶಮಯವಾಗಿ ಅಸಾಮಾನ್ಯವಾದ ಯಾವ ಪಾತ್ರವು ಸರಿಗಟ್ಟಲಾರದ ವ್ಯಕ್ತಿತ್ವವಾಗಿ ಪರಿಪೂರ್ಣವಾಗಿ ಹೊರಬಂದು ಉನ್ನತ ಸ್ಥಾನದಲ್ಲಿದ್ದಾಳೆ.

ಇಲ್ಲಿ ಶ್ರೀ ರಾಮಾಯಣ ದರ್ಶನಂನ ಪ್ರಮುಖ ಪಾತ್ರಗಳ ವೈಶಿಷ್ಟ್ಯಗಳನ್ನು ಲೇಖಕಿ ಸರಳವಾಗಿ ಓದುಗನಿಗೆ ಅರ್ಥವಾಗುವಂತೆ ತೆರೆದಿಟ್ಟಿರುವುದು ಮೆಚ್ಚತಕ್ಕ ವಿಷಯ.



✍ ಪೂರ್ಣಿಮಾ ಎಸ್. ಶೆಟ್ಟಿ

ವೀರಪ್ಪ ಮೊಯಿಲಿ ಅವರ ಶ್ರೀ ರಾಮಾಯಣ ಮಹಾಅನ್ವೇಷಣಂ' ರಾಮಾಯಣದ ಕಥೆಯಲ್ಲಿ ರಾಜ ದಶರಥನ ಆಸ್ಥಾನದಲ್ಲಿ ಪ್ರಜೆಗಳನ್ನು ಅತ್ಯಂತ ಪ್ರೀತಿಯಿಂದ ಕಾಣಲಾಗುತ್ತಿತ್ತು. ನಾಗಮಂಡಲ ಎಂಬ ನಾಗರಾಜನ ಪೂಜಾರಾಧನೆಯನ್ನು , ಈಗಲೂ ತುಳುನಾಡಿನಲ್ಲಿ ಆಚರಿಸುತ್ತಿರುವ 'ಕೆಡ್ಡಸೊ' ಮೊದಲಾದ ಆಚರಣೆಗಳನ್ನು ಅಯೋಧ್ಯೆಯಲ್ಲಿ ಮಾಡಲಾಗುತ್ತಿತ್ತು ಎಂಬುದರ ವಿವರಣೆಗಳಿವೆ ಎನ್ನುತ್ತಾರೆ. ಮೊಯಿಲಿಯವರು ಅಹಲ್ಯೆಯ ವರ್ಣನೆಯನ್ನು ಬಹಳ ಹೃದ್ಯವಾಗಿ ಮಾಡಿದ್ದಾರೆ. ನಡೆದು ಹೋದ ತಪ್ಪಿಗೆ ತಾನೂ ಕಾರಣಳೆಂದು ತಿಳಿದ ಅಹಲ್ಯೆ ಕುಟೀರದ ಒಳಗೆ ಹೋಗಿ ಬಾಗಿಲನ್ನು ಮುಚ್ಚಿ ಇಹಲೋಕದಿಂದ ದೂರವಿದ್ದಳು. ರಾಮನು ಬಂದು 'ಹೇ ತಾಯೇ ತೆರೆಯೌ ಬಾಗಿಲನು' ಎಂದು ಕರೆದಾಗಲೇ ಚಾತಕ ಪಕ್ಷಿಯ ತೆರದಿ ಸುದೀರ್ಘ ಕಾಲ ಮುಚ್ಚಿದ್ದ ಬಾಗಿಲು ತೆರೆಯಿತು. "ನಿನ್ನೊಳಗೆ ಕಂಡೆವೈ ಕೌಸಲ್ಯೆ ಸುಮಿತ್ರೆಯರ ದಿವ್ಯ ಸನ್ನಿಧಿಯನು" ಎಂದು ರಾಮ ನಮಿಸುತ್ತಾನೆ. ಇಲ್ಲಿನ ವಿಶೇಷತೆಯೆಂದರೆ ಅಹಲ್ಯೆಯು ಕಲ್ಲಾಗಿ ಬಿದ್ದಿರಲಿಲ್ಲ. ಕಲ್ಲಿನಂತೆ ಜಡವಾಗಿ ತಪಸ್ಸಾನ್ನಾಚರಿಸುತ್ತಿದ್ದ ಸಜೀವ ಸ್ತ್ರೀಯಾಗಿಯೇ ಇದ್ದಳು. ಸೀತೆಯ ಜನನ, ಅದರ ಕುರಿತು ಜನರಿಗಿರುವ ಕುತೂಹಲ, ಇಲ್ಲಿಯೂ ಉಚ್ಚ, ನೀಚ ಜಾತಿ ಭೇದ, ಚುಚ್ಚು ಮಾತುಗಳು ಇವೆಲ್ಲ ಆ ಯುಗದಲ್ಲೂ ಸಾಮಾನ್ಯವಾಗಿತ್ತು ಎಂದು ಹಲವು ನಿದರ್ಶನಗಳನ್ನು ನೀಡುತ್ತಾರೆ. ಮೊಯಿಲಿಯವರು ಕಾವ್ಯದ ನಾಂದಿಯಿಂದ ಹಿಡಿದು ಮಂಗಳದವರೆಗೆ ಧಾರ್ಮಿಕ, ಸಾಮಾಜಿಕ, ಮಾನವೀಯ ಮೌಲ್ಯಗಳನ್ನು ಸಮಕಾಲೀನ ದೃಷ್ಟಿಯಿಂದ ಮೂಡಿಸಿದ್ದಾರೆ ಎಂದು ಲೇಖಕಿ ಅಭಿಪ್ರಾಯ ಪಡುತ್ತಾರೆ.

1886ರಲ್ಲಿ ಬ್ರಹ್ಮ ಶ್ರೀ ಪಟ್ಟಾಭಿರಾಮ ಶಾಸ್ತ್ರಿಗಳಿಂದ ನವೀಕರಿಸಲ್ಪಟ್ಟ ಶ್ರೀಮದುತ್ತರ ರಾಮಾಯಣವನ್ನು ಕೂಡಾ ಇಲ್ಲಿ ವರ್ಣಿಸಲಾಗಿದೆ. ಆ ಕಾಲದಲ್ಲಿ ಕಾವ್ಯಗಳನ್ನು ಬರೆಯುತ್ತಿದ್ದ ಕನ್ನಡ ಭಾಷಾ ಶೈಲಿ ಸುಂದರವಾಗಿ ಮೂಡಿಬಂದಿದೆ.

ರಾಮಾಯಣ ಅಂದರೆ ಕೇವಲ ಅದು ಭಾರತ ದೇಶಕ್ಕೆ ಸೀಮಿತವಲ್ಲ. ಹೊರರಾಜ್ಯಗಳಲ್ಲಿಯೂ ರಾಮಾಯಣ ತುಂಬ ಪ್ರಚಲಿತದಲ್ಲಿದೆ ಎಂಬುದನ್ನು ಸರೋಜಾ ಶ್ರೀನಾಥ್ ಅವರು ಈ ಕೃತಿಯಲ್ಲಿ ಅಧ್ಯಯನ ನಡೆಸಿ ಕೆಲವು ಕುತೂಹಲಕರವಾದ ವಿಷಯಗಳನ್ನು ಓದುಗರೊಂದಿಗೆ ಹಂಚಿಕೊಂಡಿದ್ದಾರೆ.

ಜಪಾನಿನಲ್ಲಿ ಮುಖ್ಯವಾಗಿ ಎರಡು ರಾಮಾಯಣ ಕೃತಿಗಳಿವೆ. ಮೊದಲನೆಯದು ಹನ್ನೆರಡನೆ ಶತಮಾನಕ್ಕೆ ಸೇರಿದ ತೈರನೊ ಯಸೊಯೊರಿ ಬರೆದ ಹೊಬುಟ್ಸುಶು. ಮತ್ತೊಂದು ದಶರಥನು ಮೃಗವೆಂದು ತಿಳಿದು ಋಷಿಕುಮಾರನನ್ನು ಕೊಂದ ಕತೆ. ಇದನ್ನು ಬರೆದವನು ಮಿನಮೊಟೂನೊ ತಮೆನೊರಿ. ಈ ಕೃತಿಯ ಹೆಸರು 'ಸಂಬೊ–ಎಕಟೊಬ. ಈ ಎರಡೂ ಕಥೆಗಳು ಜಪಾನಿನಲ್ಲಿ ಯಾವ ರೀತಿಯಲ್ಲಿ ಪ್ರಚಲಿತದಲ್ಲಿದೆ ಎನ್ನುವುದನ್ನು ಇಲ್ಲಿ ಲೇಖಕಿ ತಿಳಿಸಿದ್ದಾರೆ.

ಶ್ರೀಲಂಕಾ ದ್ವೀಪದಲ್ಲಿ ರಾಮಾಯಣ ಎಂಬ ಭಾಗದಲ್ಲಿ ಸಿ.ಡಾನ್ ಬಾಸ್ಟಿಯನ್ ರಾಮಾಯಣದ ಸಿಂಹಳೀ ಭಾಷಾಂತರಕ್ಕೆ ಕಾರಣಕರ್ತನು ಎನ್ನುವ ಅಂಶ ಓದುಗನಿಗೆ ಸ್ಪಷ್ಟವಾಗುತ್ತದೆ. ಪಾರ್ಸಿ ಸಂಗೀತ ನಾಟಕಗಳಿಂದ ನುರ್‌ತಿಯ' ಎಂಬ ನಾಟಕ ಶೈಲಿ ಚಾಲನೆಯಲ್ಲಿತ್ತು. ಹಿಂದೂಸ್ಥಾನಿ ಸಂಗೀತ ಹಾಗೂ ಸಂಸ್ಕೃತ ನಾಟಕಗಳ ಸಂಪ್ರದಾಯಗಳನ್ನನುಸರಿಸಿ ವಕೀಲ ಮತ್ತು ನಾಟಕ ಕರ್ತ ಜಾನ್ ಡಿ ಸಿಲ್ವಾ ಅನೇಕ ನಾಟಕಗಳನ್ನು ಅಲ್ಲದೆ ರಾಮಾಯಣವನ್ನಾಧರಿಸಿ 'ಉತ್ತರ ರಾಮ ಚರಿತ'ವನ್ನು ಸಂಸ್ಕೃತದಿಂದ ಸಿಂಹಳೀ ಭಾಷೆಗೆ ಅನುವಾದಿಸಿದ್ದಾನೆ. ಇಲ್ಲಿ ವಿಷ್ಣುವನ್ನು ರಾಮನೆಂದು ನಂಬಲಾಗಿದೆ. ಅದಕ್ಕೆ ಸಂಬಂಧಿಸಿದ ಕಥೆಯೂ ಸ್ವಾರಸ್ಯಕರವಾಗಿದೆ.

ಇಪ್ಪತ್ತನೇ ಶತಮಾನದ ಉತ್ತರಾರ್ಧದಲ್ಲಿ 'ಮಹರಾಡಿಯ ಲವಣ' ಎಂಬ ಸಂಕ್ಷಿಪ್ತ ರಾಯಾಯಣದ ಪ್ರತಿ ಫಿಲಿಪ್ಪೈನ್ಸ್ ಭಾಷೆಯಲ್ಲಿ ದೊರೆತಿದೆ. ಇದರ ಮೂಲ ಗ್ರಂಥ'ಮರನಾವೊ'. ಇಲ್ಲಿ ರಾವಣ 'ಲವನ್/ಣ ಎಂತಲೂ, ರಾಡಿಯ ಮನ್‌ಗನ್‌ದಿರಿ(ರಾಮ), ರಾಡಿಯ ಮಂಗಾವನ (ಲಕ್ಷ್ಮಣ), ತುವಾನ್ ಪೊತ್ರೆ ಮಲೈಲುತಿಹ (ಸೀತೆ) . ಇದರಲ್ಲಿಯೂ ಮನಸೂರೆಗೊಳ್ಳುವ ಕಥೆಗಳಿವೆ. ಈ

ಕಥೆಯಲ್ಲಿ ಅರಬ್ ಮತ್ತು ಭಾರತೀಯ ಸಂಸ್ಕೃತಿಗಳ ಪ್ರಭಾವವು ಕಥಾ ನಿರೂಪಣೆ, ಸಾಹಿತ್ಯ ರಚನೆಯಲ್ಲಿ ಕಾಣಬಹುದು ಎಂದು ಲೇಖಕಿ ಅಭಿಪ್ರಾಯ ಪಡುತ್ತಾರೆ.

ಮಂಗೋಲಿಯಾದ ರಾಮಾಯಣವನ್ನು ಅಧ್ಯಯನ ಮಾಡಿದ ಸರೋಜಾ ಶ್ರೀನಾಥ್ ಅವರು ರಾಮಾಯಣಕ್ಕೆ ಸಂಬಂಧಿಸಿದ ಜನಪ್ರಿಯ ವಿವಿಧ ಕಥೆಗಳ ಮೂಲ ಆಧಾರವೆಂದರೆ ಮರದ ಹಲಗೆಗಳ ಮೇಲಿನ ಕೆತ್ತನೆ ಮತ್ತು ಕೈಬರಹಗಳ ಪುಸ್ತಕಗಳು. ಇದರಿಂದ ಪುರಾತನ ಕಾಲದಿಂದಲೂ ಮಂಗೋಲಿಯಾದಲ್ಲಿ ರಾಮಾಯಣದ ಪರಿಚಯವಿತ್ತು. ಪ್ರತಿ ಕಥಾ ನಿರೂಪಣೆಯಲ್ಲೂ ಕಲಾತ್ಮಕ ಮಂಗೋಲಿಯ ಸಂಸ್ಕೃತಿಯ ಛಾಯೆಯು ಪ್ರಜ್ವಲಿಸುವುದನ್ನು ಕಾಣಬಹುದು ಎಂದು ಓದುಗನ ಮುಂದೆ ಸ್ವಾರಸ್ಯಕರವಾದ ಕಥೆಯನ್ನು ತೆರೆದಿಡುತ್ತಾರೆ. ಮಂಗೋಲಿಯಾದ ಬೌದ್ಧ ಲಾಮಾಗಳು ರಾಮನ ಕಥೆಯನ್ನು ಪದ್ಯ ಕಾವ್ಯಗಳಲ್ಲಿ ರಾಮಾಯಣದ ಸನ್ನಿವೇಶಗಳನ್ನು ಸುಂದರವಾಗಿ ಚಿತ್ರಿಸಿದ್ದಾರೆ. 'ಕಪಿಲ್' ನಗರದಲ್ಲಿ ದಶರಥ ದೊರೆಯಾಳುತ್ತಿದ್ದನು. ಅವನ ಮಗ ರಾಮ. ಇಲ್ಲಿನ ಕಥೆಯಲ್ಲಿ ಒಂದು ಆಕರ್ಷಕ ಸನ್ನಿವೇಶದ ವಿವರಣೆ ಇದೆ. ಆ ಕಥೆ ಈ ರೀತಿಯಾಗಿದೆ. " ರಾಮ ರಾವಣ ಯುದ್ಧವು ಭಯಂಕರವಾಗಿ ನಡೆಯುತ್ತಿತ್ತು. ರಾವಣನನ್ನು ಹುಡುಕುತ್ತಾ ರಾಮನು ರಾವಣ ಸ್ಪಟಿಕದಿಂದ ನಿರ್ಮಿತವಾದ ಅರಮನೆಗೆ ಬಂದನು. ನಯವಾದ ಗೋಡೆಗಳಲ್ಲಿ ರಾವಣನ ನೂರು ಪ್ರತಿಮೆಗಳನ್ನು ಜೋಡಿಸಲಾಗಿತ್ತು. ನಿಜವಾದ ರಾವಣನು ಯಾರೆಂದು ರಾಮನಿಗೆ ತಿಳಿಯಲಿಲ್ಲ. ಆಗ ರಾಮನಿಗೆ ಭಕ್ತಿಪೂರ್ವಕ ಸೇವೆಗೈಯುತ್ತಿದ್ದ ಹನುಮಂತನು ನಿಜವಾದ ರಾವಣನನ್ನು ತೋರಿಸಿಕೊಟ್ಟನು. ರಾಮನು ಬಾಣ ಪ್ರಯೋಗ ಮಾಡಿ ರಾವಣನನ್ನು ಸಂಹರಿಸಿದನು. ಈ ರೀತಿಯ ಕಥೆ ಬೇರೆಲ್ಲೂ ಇಲ್ಲ ಎಂದು ಲೇಖಕಿ ಅಭಿಪ್ರಾಯ ಪಡುತ್ತಾರೆ.

ಲಾವೊಸ್ ಎಂದರೆ ಚಿನ್ನದ ನಾಡು. ಹಿಂದೆ ಅದಕ್ಕೆ ಮುವುಂಗ್ ಜಿ ಎಂಗ್ ಥಾಂಗ್ ಎಂದು ಲಾವೊಸ್ ದೇಶದ ಹೆಸರಿದ್ದಿತು. ಇದು ಬರ್ಮಾ ವಲಯ, ಥೈಲ್ಯಾಂಡ್, ಕಾಂಬೋಡಿಯಾ ಮತ್ತು ವಿಯೆಟ್ನಾಂಮಿನ ಕೆಲವು ಭಾಗಗಳು ಒಳಗೊಂಡಿದ್ದ ಪ್ರದೇಶ. ಇಂತಹ ಲಾವೋಸ್‌ನಲ್ಲಿ ಎರಡು ವಿಧದ ರಾಮಾಯಣ ಪ್ರಸಿದ್ಧಿ ಪಡೆದಿದೆ. 'ಲು ಅಂಗ್ ಪ್ರಹಂಗ್' ರಾಜಧಾನಿಯಲ್ಲಿಯೂ ಮತ್ತು 'ವಿಯನ್ ತಿಯಾನ್' ಎನ್ನುವುದು. 'ವಿಯೆನ್ ತಿಯಾನ್' ರಾಮಾಯಣದ ಹಸ್ತ ಪ್ರತಿಗಳಿಗೆ ಮತ್ತು ದೇವಾಲಯದ ವರ್ಣಚಿತ್ರಗಳಿಗೆ ರಾಜಾಶ್ರಯ ದೊರೆತಿತ್ತು. ಭಾರತೀಯ ಸಾಹಿತ್ಯ, ಸಂಸ್ಕೃತ ಭಾಷೆ, ಭಾರತೀಯ ತತ್ವ ಜ್ಞಾನದ ಅಪಾರ ಪಾಂಡಿತ್ಯವನ್ನು ರಾಜನು ಹೊಂದಿದ್ದನು. ವಿಯಾನ್‌ತಿಯಾನ್ ಪ ಲಕ್ (ಪ್ರೀತಿಯ ಲಕ್ಷ್ಮಣ) ಪ ಲಾಮ್ (ಪ್ರೀತಿಯ ರಾಮ) ಗ್ರಂಥವು ಮೂಲವನ್ನು ಅನುಸರಿದೆಯಾದರೂ ಅದು ಭಾಷಾಂತರವಲ್ಲ ಎಂಬುದು ಸರೋಜಾ ಶ್ರೀನಾಥ್ ಅವರು ಪರಿಣಾಮಕಾರಿಯಾಗಿ ವಿವರಿಸುತ್ತಾರೆ.

ಇಂಡೋನೇಶ್ಯಾದ ರಾಮಾಯಣವೂ ಸ್ವಾರಸ್ಯಕರವಾಗಿದ್ದು ಪ್ರತಿಯೊಂದು ಕಥೆ, ಉಪಕಥೆಗಳೂ ಮೂಲರಾಮಾಯಣವನ್ನು ಹೋಲುತ್ತದೆ.

ಒಟ್ಟಿನಲ್ಲಿ ಸರೋಜಾ ಶ್ರೀನಾಥ ಅವರ 'ಅಮರ ರಾಮಾಯಣ' ವನ್ನು ಓದುತ್ತಾ ಹೋದಂತೆ ಭಾರತ ದೇಶದಲ್ಲಿ ಮಾತ್ರವಲ್ಲದೆ ಬೇರೆ ದೇಶಗಳಲ್ಲೂ ರಾಮಾಯಣವು ಜನಪ್ರಿಯವಾಗಿದೆ ಎಂಬ ಅಂಶ ಸ್ಪಷ್ಟವಾಗುತ್ತದೆ. ಅದನ್ನು ಲೇಖಕಿ ಪರಿಣಾಮಕಾರಿಯಾಗಿ ಇಲ್ಲಿ ಚಿತ್ರಿಸಿದ್ದಾರೆ. ಶತಮಾನಗಳ ಹಿಂದೆ ರಾಮಾಯಣದ ಕಥೆಯು ಹಿಮಾಲಯವನ್ನು ದಾಟಿ ಅಲ್ಲಿನ ವಾತಾವರಣಕ್ಕನುಗುಣವಾಗಿ ಬದಲಾವಣೆ ಹೊಂದಿತು. ಅಲ್ಲಿನ ಸಂಸ್ಕೃತಿಯಲ್ಲಿ ಬೆರೆತು ಒಂದಾಯಿತು. ಹೀಗೆ ಶ್ರೀಮತಿ ಸರೋಜಾ ಶ್ರೀನಾಥ್ ಅವರು ರಾಮಾಯಣದ ವಿವಿಧ ಆಯಾಮಗಳನ್ನು, ಭಿನ್ನ ದೇಶಗಳಲ್ಲಿ ಅದು ಪರಿವರ್ತಿತವಾಗಿ ಅವರದ್ದೇ ಆದ ಶೈಲಿಯಲ್ಲಿ ಮೂಡಿಬರುವ ಪರಿಯನ್ನು ಹೃದ್ಯವಾಗಿ ಅನಾವರಣಗೊಳಿಸಿರುವುದು ಶ್ಲಾಘನೀಯವಾಗಿದೆ. ಅವರ ಪರಿಶ್ರಮ ಇಲ್ಲಿ ಸಾರ್ಥಕವಾಗಿ ಮೂಡಿಬಂದಿದೆ. ಈ ಕೃತಿಯು ಅಭಿಜಿತ್ ಪ್ರಕಾಶನದ 59ನೆಯ ಕುಸುಮವಾಗಿ ಲೋಕಾರ್ಪಣೆಗೊಂಡಿರುವುದು ಸಂತಸದ ವಿಷಯ. ಎಲ್ಲರ ನೆಚ್ಚಿನ ರಾಮಾಯಣವನ್ನು ತೌಲನಿಕವಾಗಿ ಅಧ್ಯಯನ ನಡೆಸಿ ಓದುಗನ ಮನಸ್ಸಿಗೂ ಉತ್ತಮ ಚಿಂತನೆಯನ್ನು ನೀಡಿದ ವಿದುಷಿ ಸರೋಜಾ ಶ್ರೀನಾಥ್ ಅವರಿಗೆ ಹಾರ್ದಿಕ ಅಭಿನಂದನೆಗಳು. ■

ಜೀವಿ ವಚನ

## ನೀನು ಬಿಂದುವಲ್ಲ ಸಿಂಧು

1

ಎಲೆ ಪಿಂಡಾಂಡವೇ, ನೀನೆ ಬ್ರಹ್ಮಾಂಡವೆಂಬುದನ್ನು ಅರಿಯೆಯಾ?
ಪೃಥ್ವಿ, ಆಪ್, ತೇಜ್, ವಾಯು, ಆಕಾಶ ಇವೆಲ್ಲ ನಿನ್ನೊಳಗೇ ಇಹವು.
ನಿನ್ನ ಈ ದೇಹದ ಪ್ರತಿ ಅಣುವಿನಲ್ಲೂ ಮಹತ್ ತತ್ತ್ವ ಅಡಗಿದೆ.
ಕುರಿಗಳ ಹಿಂಡಿನಲ್ಲಿ ದಾರಿತಪ್ಪಿ ಸೇರಿದ ದಿಟ ಸಿಂಹದ ಮರಿ ನೀನು.
ಬೆಳಕಿನ ಗುಂಡಿ ನಿನ್ನ ಎದೆಯಲ್ಲಿದೆ, 'ಕತ್ತಲೆ' ಎಂದು ಮಿಡುಕುವಿಯೇಕೆ?

2

ಯಾವನೂ ನಿರುಪಯೋಗಿಯಾಗಿಲ್ಲ, ಎಲ್ಲರಲ್ಲೂ ಅಪಾರ ಶಕ್ತಿ ಅಡಗಿದೆ.
ನಾವೆಲ್ಲ ದುಂಡು ತೂತಿನಲ್ಲಿರುವ ಚೌಕ ಗೂಟಗಳಂತೆ ಒದ್ದಾಡುತ್ತಿದ್ದೇವೆ.
ಏನೋ ಓದುತ್ತೇವೆ, ಏನೋ ಮಾಡುತ್ತೇವೆ, ಯಾರನ್ನೋ ಕಟ್ಟಿಕೊಂಡು
ಬಾಳುತ್ತೇವೆ.
ನಮ್ಮ ಯೋಗ್ಯತೆ, ಸಾಮರ್ಥ್ಯ, ಕನಸಿನ ನಿಜ ನೆಲೆ, ತಿಳಿದಾಗ ಬಹಳ ತಡವಾಗಿರುತ್ತದೆ.
ಇತರರಿಗಾಗಿ ತೋಡಿದ ಹೊಂಡದಲ್ಲಿ ನಾವೇ ಬೀಳುತ್ತೇವೆ, ಮತ್ತೆ ಒದ್ದಾಡುತ್ತೇವೆ.

3

ಜೀವನದಲ್ಲಿ ಗೆಲ್ಲುವುದೇ ಆದರೆ, ನಿನ್ನನ್ನೇ ನೀನು ಮೊದಲು ಗೆಲ್ಲಲು ಕಲಿಯಬೇಕು.
ನೀನೇ ನಿನ್ನ ಮಿತ್ರ, ನೀನೇ ನಿನ್ನ ಶತ್ರು ಕೂಡ; ಇದು ಆಶ್ಚರ್ಯ,
ಆದರೂ ಕಟು ಸತ್ಯ!
ಕಾಮನನ್ನು ಗೆದ್ದು ಕ್ರೋಧದಲ್ಲಿ ಬೀಳುತ್ತೇವೆ, ಮದವನ್ನು ಗೆದ್ದು ಮತ್ಸರಕ್ಕೆ
ಸೋಲುತ್ತೇವೆ.
ಅಹಂಕಾರ ಯಾರನ್ನೂ ಬಿಟ್ಟಿಲ್ಲ, 'ನಾ ಹೋದರೆ ಸ್ವರ್ಗಕ್ಕೆ ಹೋಗಬಹುದು'
ಎಂದ ಕನಕ.
'ಯೋಗಃ ಚಿತ್ತವೃತ್ತಿ ನಿರೋಧಃ' ಎಂದ ಪತಂಜಲಿ, 'ತತ್ರ ಯೋಗೀಭವಾರ್ಜುನ'
ಎಂದ ಕೃಷ್ಣ.

4

ಕತ್ತಲೆಯನ್ನು ದ್ವೇಷಿಸಿದರೆ ಸಾಲದು, ಬೆಳಕನ್ನು ಪ್ರೀತಿಸಲು ಕಲಿಯಬೇಕು.
ಬರಿ ಬುದ್ಧಿವಾದ ಹೇಳಿದರೆ ಸಾಲದು, ನುಡಿದಂತೆ ನಡೆದು ತೋರಬೇಕು.
ಮಕ್ಕಳನ್ನು ಪ್ರೀತಿಸಿದರೆ ಸಾಲದು, ಅವರಿಗಾಗಿ ಎಲ್ಲ ತ್ಯಾಗಕ್ಕೆ ಸಿದ್ಧರಾಗಿರಬೇಕು.
ದಿನಗಳನ್ನು ನೂಕಿದರೆ ಸಾಲದು, ಬಾಳ್ವೆಯಲ್ಲಿ ಶ್ರದ್ಧೆಯ ಬೀಜ ಬಿತ್ತಿ ಬೆಳೆಯಬೇಕು.
ಬೆಳಕಿಗಾಗಿ ಹುಡುಕಾಡಿದರೆ ಸಾಲದು, ತಾನೆ ಬೆಳಕಾಗಿ ಇತರರಿಗೆ ಮಾರ್ಗ
ತೋರಬೇಕು.



_ ಡಾ। ಜೀವಿ ಕುಲಕರ್ಣಿ
(M: 9324242172)

(ಸ್ವಾಮಿ ಜಗದಾತ್ಮಾನಂದರ 'ಬದುಕಲು ಕಲಿಯಿರಿ' ಅಧ್ಯಾ0ಯ ಎರಡರಿಂದ ಸ್ಫುರಿಸಿದ್ದು)

## ತೃಪ್ತ ಜೀವಿ


ಚಪ್ಪಲಿ ಹೊಲಿಯುವವನೊಬ್ಬ ರಸ್ತೆ ಬದಿ ಕುಳಿತು
ನಿತ್ಯ ಕರ್ಮದಿ ತೊಡಗಿಹನು ಬಿಸಿಲು ಮಳೆಗಾಳಿಯು
ಪರವೆಯಿಲ್ಲವಗೆ ನಿಸರ್ಗಬಾಧೆ ತೃಪ್ತ ಜೀವಿಯವ
ಚಿಂತೆಯೊಂದೇ ಅವಗೆ ಹೆಂಡತಿಯ ಬಿಸಿರೊಟ್ಟಿಯದು.

*- ಡಾ. ಕರುಣಾಕರ್ ಎನ್. ಶೆಟ್ಟಿ*

# ಶ್ರೀಮನ್ನಾರಾಯಣಾಮೃತ ಧಾರಾ: ಸರಳತೆಯೆ ಮೂರ್ತಿವೆತ್ತ ಭಾವಾನುವಾದ

(ಶ್ರೀಮನ್ನಾರಾಯಣಾಮೃತ ಧಾರಾ: ಶ್ರೀಮದ್ಭಗವದ್ಗೀತೆಯ ಸಂಸ್ಕೃತ ಶ್ಲೋಕಗಳ ಸರಳ ಕನ್ನಡ ಅನುವಾದ. ಲೇಖಕರು: ಶ್ರೀ ಎನ್.ಆರ್.ರಾವ್ ಪ್ರಕಾಶಕರು: ನಾರಾಯಣಾಮೃತ ಫೌಂಡೇಷನ್ 1588, 80 ಅಡಿ ರಸ್ತೆ, ಹೆಬ್ಬಾಳ್ ಎರಡನೆಯ ಹಂತ, ಸಂಗಮ ವೃತ್ತದ ಬಳಿ, ಮೈಸೂರು-570 017, ಪುಟ 200, ಬೆಲೆ ರೂ.150 (ಸಂಪರ್ಕ: 09821525351)

'ದೇಶ ಸುತ್ತು ಕೋಶ ಓದು' ಎನ್ನುತ್ತದೆ ಗಾದೆ. ಹೌದು, ಪುಸ್ತಕಗಳು ನಮ್ಮ ಜ್ಞಾನವಿಕಾಸದ ಸಾಧನಗಳು. ಜೀವನದ ಅಂಧಕಾರವನ್ನು ಕಳೆದು ಜ್ಞಾನದ ಬೆಳಕನ್ನು ನಮಗೆ ನೀಡುತ್ತವೆ. ಅಂತಹದೇ ಒಂದು ಪುಸ್ತಕ ನಾನು ಇತ್ತೀಚೆಗೆ ಓದಿದ "ಶ್ರೀ ಮನ್ನಾರಾಯಣಾಮೃತ ಧಾರಾ", ಲೋಕೋತ್ತರ ಕಲ್ಯಾಣಕ್ಕೆ ಭಗವಾನ್ ವ್ಯಾಸರ ಕೊಡುಗೆ. ಶ್ರೀ ಮದ್ಭಗವದ್ಗೀತೆಯ ಸಂಸ್ಕೃತ ಶ್ಲೋಕಗಳ




ಸರಳ ಕನ್ನಡ ಭಾವಾನುವಾದ ಇದರಲ್ಲಿದೆ. ಇಲ್ಲಿ ಭಗವದ್ಗೀತೆಯ ಅನುವಾದವನ್ನು ಸರಳವಾಗಿ, ತಿಳಿಯಾದ ಭಾಷೆಯಲ್ಲಿ, ಕಾವ್ಯದ ಶೈಲಿಯಲ್ಲಿ ಮಾಡಲಾಗಿದೆ.

ಜಾಗತಿಕ ಇತಿಹಾಸದಲ್ಲಿ ಭಾರತೀಯ ಸಂಸ್ಕೃತಿಗೆ ಒಂದು ವಿಶಿಷ್ಟ ಸ್ಥಾನವಿದೆ. ಈ ಸಂಸ್ಕೃತಿಯ ಬಹುಮುಖ್ಯವಾದ ಸಾಹಿತ್ಯಿಕ ಸಮರ್ಥನೆಯೆಂದರೆ 'ಭಗವದ್ಗೀತೆ'. ಪಾಶ್ಚಾತ್ಯ ಜಗತ್ತು ಕೂಡ ಭಗವದ್ಗೀತೆಯನ್ನು ಗೌರವಿಸುತ್ತದೆ. 'ಭಗವದ್ಗೀತೆ' ಮತ್ತು 'ವಿಷ್ಣುಸಹಸ್ರನಾಮ' ಇವೆರಡೂ ಮಹಭಾರತದ ಎರಡು ಕಣ್ಣುಗಳು. ಅಪೌರುಷೇಯವಾದ ವೇದಗಳು ಜ್ಞಾನಕ್ಕೆ ಮೂಲಸಾಧನಗಳು. ವೇದಗಳಿಗಿಂತ ಮಹಾಭಾರತ ಹಿರಿದು ಎಂದು ಹೇಳುತ್ತಾರೆ. ಕಾರಣ ಭಗವದ್ಗೀತೆ ಹಾಗೂ ವಿಷ್ಣುವಿನ ಸಹಸ್ರನಾಮವನ್ನು ಒಳಗೊಂಡಿರುವಂತಹದ್ದು. ಯೋಗಶಾಸ್ತ್ರ ಮತ್ತು ಕೃಷ್ಣಾರ್ಜುನ ಸಂವಾದವನ್ನು ಇದು ಒಳಗೊಂಡಿದೆ. "ನಾರಾಯಣಾಮೃತ ಫೌಂಡೇಶನ್"ನ ಶ್ರೀಯುತ ಎನ್.ಆರ್ ರಾವ್ ಅವರು ಈ "ಶ್ರೀ ಮನ್ನಾರಾಯಣಾಮೃತ ಧಾರೆ"ಯನ್ನು ಹರಿಸಿದ ಮಹಾನುಭಾವವಾಗಿದ್ದಾರೆ. ವೃತ್ತಿಯಲ್ಲಿ ವಕೀಲರಾಗಿದ್ದು ಪ್ರವೃತ್ತಿಯಲ್ಲಿ ಸಾಧಕರಾಗಿದ್ದಾರೆ. ಅವರ ಸಾಧನೆ ಬಹುಮುಖದ್ದು. ಸಮಾಜಸೇವೆ, ಕಲಾಸೇವೆ, ಸಾಹಿತ್ಯಸೇವೆ, ಧಾರ್ಮಿಕ ಸಂಘಸಂಸ್ಥೆಗಳ ಸೇವೆ ಇತ್ಯಾದಿ. ಅವರು ಆಧ್ಯಾತ್ಮದಲ್ಲಿ ಇಷ್ಟೊಂದು ಆಸಕ್ತಿ ವಹಿಸಿರುವುದು ಸಂತೋಷದ ವಿಷಯ. ಭಗವದ್ಗೀತೆಯನ್ನು ಎಲ್ಲರೂ ಮನನ ಮಾಡಿಕೊಂಡು ಉತ್ತಮ ಜೀವನ ನಡೆಸಬೇಕೆಂಬುದೇ ಅವರ ಆಶಯ. ಭಗವದ್ಗೀತೆಯ ಹಲವಾರು ಅನುವಾದಗಳು ಲಭವಾಗಿವೆ. ಅವೆಲ್ಲವುಗಳಿಗಿಂತಲೂ ಸುಲಭವಾಗಿ, ಎಲ್ಲರಿಗೂ ತಿಳಿಯುವಂತೆ, ತಿಳಿಗನ್ನಡದಲ್ಲಿ, ಕಾವ್ಯಮಯ ಶೈಲಿಯಲ್ಲಿ ಮಾಡಿರುವ ಅನುವಾದವೇ ಈ ಗ್ರಂಥದ ವೈಶಿಷ್ಟ್ಯವಾಗಿದೆ.

ಮಹಾಭಾರತದ ಕರ್ತೃವಾದ ವೇದವ್ಯಾಸರಿಗೆ ಬಹಳ ಭಕ್ತಿಪೂರ್ವಕವಾಗಿ ನಮನವನ್ನು ಸಲ್ಲಿಸಲಾಗಿದೆ. 'ವ್ಯಾಸರಿಗೆ, ವೇದವ್ಯಾಸರಿಗೆ, ವಿಜ್ಞಾನಿ ವ್ಯಾಸರಿಗೆ, ಪ್ರಚಂಡ ವೈದ್ಯ ವ್ಯಾಸರಿಗೆ, ಸಮಾಜದ ಉದ್ಧಾರಕ ವ್ಯಾಸರಿಗೆ, ಮಹಾಭಾರತದ ಕರ್ತೃ ವ್ಯಾಸರಿಗೆ, ವಿಘ್ನೇಶ ಗಣಪತಿಯ ಅಧಿಕಾರನಾಗಿಸಿದ ವ್ಯಾಸರಿಗೆ, ಭಗವಂತನ ನುಡಿಗಳ ನಿಷ್ಠೆಯಿಂ ಹಿಡಿದಿಟ್ಟ ವ್ಯಾಸರಿಗೆ, ನಮನ, ಸಾಷ್ಟಾಂಗ ನಮನ' ಎಂದು ನಮಿಸಿ ಈ ಎಲ್ಲಾ ವಿಶೇಷಗಳನ್ನು ಮುಂದೆ ವಿವರವಾಗಿ ವಿವರಿಸಲಾಗಿದೆ. ಹೀಗೆ ಪುಸ್ತಕದ ಮೂಲಕರ್ತೃವನ್ನು ವಿಶೇಷವಾಗಿ ನೆನೆದಿರುವುದು ಈ ಪುಸ್ತಕದ ಒಂದು ವೈಶಿಷ್ಟ್ಯವಾಗಿದೆ. ಮುಂದೆ ಕುರುಕ್ಷೇತ್ರ ಯುದ್ಧದ ಹಾಗೂ ಭಗವದ್ಗೀತೆಯ ಭೂಮಿಕೆಯನ್ನು ತಿಳಿಸಲಾಗಿದ್ದು, ಇದು ಭಗವದ್ಗೀತೆ ಸೃಷ್ಟಿಯಾದ ಹಿನ್ನಲೆಯನ್ನು ಬಹಳ ಚಿಕ್ಕದಾಗಿ ಚೊಕ್ಕದಾಗಿ ನಿರೂಪಿಸಲಾಗಿದೆ.

ಈ ಪುಸ್ತಕದಲ್ಲಿ ಸಂಸ್ಕೃತದ ಶ್ಲೋಕಗಳನ್ನು ಕನ್ನಡ ಲಿಪಿಯಲ್ಲಿ ಎಡಪುಟದಲ್ಲಿ ಕೊಟ್ಟು ಬಲಪುಟದಲ್ಲಿ ಅದರ ಭಾವ-ಭಾಷಾಂತರವನ್ನು ಕೊಟ್ಟಿದ್ದಾರೆ. ಹೀಗೆ ಸಂಸ್ಕೃತದಲ್ಲಿ ಶ್ಲೋಕ, ಕನ್ನಡದಲ್ಲಿ ಭಾವಾರ್ಥ, ಎರಡೂ ಒಟ್ಟಿಗಿದ್ದದ್ದು ಪಠಣಕ್ಕೂ, ತಾಯಿ-ಭಾಷೆಯಲ್ಲಿ ಅರ್ಥಮಾಡಿಕೊಳ್ಳಲೂ ಅನುಕೂಲವಾಗಿದೆ. ಇಲ್ಲಿಯ ಭಾವಾನುವಾದವು ಜನಸಾಮಾನ್ಯರು ಅರ್ಥ ಮಾಡಿ ಕೊಳ್ಳುವಷ್ಟು ಸರಳವಾಗಿದೆ, ಸುಂದರವಾಗಿದೆ. ಇಲ್ಲಿಯ ಭಾವಾನುವಾದದ ರುಚಿಯನ್ನು ಸ್ವಲ್ಪ ಸವಿಯೋಣ. ಮೊದಲನೆಯ ಅಧ್ಯಾಯ ವಿಷಾದಯೋಗ. ಯುದ್ಧದ ಪ್ರಾರಂಭದಲ್ಲಿ ತನ್ನ ಮಕ್ಕಳು, ಪಾಂಡುವಿನ ಮಕ್ಕಳು ಏನು ಮಾಡುತ್ತಾರೆಂದು ಧೃತರಾಷ್ಟ್ರ ಸಂಜಯನಿಗೆ ಕೇಳುತ್ತಾನೆ:

"ಧರ್ಮಕ್ಷೇತ್ರೇ ಕುರುಕ್ಷೇತ್ರೇ ಸಮವೇತಾ ಯುಯುತ್ಸವಃ ।
ಮಾಮಕಾಃ ಪಾಂಡವಾಶ್ಚೈವ ಕಿಮಕುರ್ವತ ಸಂಜಯ ॥ (1-1)
ಆರ್ಯರ ತಾಣದಲಿ ಧರ್ಮದ ಬೀಡಿನಲಿ ಕುರುಕ್ಷೇತ್ರದಲಿ ಯುದ್ಧಕೆ ಸೇರಿಹರು । ನನ್ನವರು, ಪಾಂಡವರು, ಅವರೇನು ಮಾಡಿಹರೆಂದು ಸಂಜಯನೆ ಹೇಳು ॥

ಎರಡನೆಯ ಅಧ್ಯಾಯ ಸಾಂಖ್ಯಯೋಗ. ಅದರಲ್ಲಿ ಕೃಷ್ಣಪರಮಾತ್ಮನು ಅರ್ಜುನನಿಗೆ ಹೇಳುವ ಶ್ಲೋಕವೊಂದನ್ನು ನೋಡೋಣ.

"ದೇಹೀ ನಿತ್ಯಮವಧ್ಯೋಽಯಂ ದೇಹೇ ಸರ್ವಸ್ಯ ಭಾರತ
ತಸ್ಮಾತ್ಸರ್ವಾಣಿ ಭೂತಾನಿ ನ ತ್ವಂ ಶೋಚಿತುಮರ್ಹಸಿ ।" (2-30)
ದೇಹ ಧರಿಸಿರುವ ಆತ್ಮನವ ಅವಿನಾಶಿ
ದೇಹ ನಶಿಸಿದರು ತಾ ನಾಶ ಹೊಂದುವವನಲ್ಲ
ಎಲ್ಲಜೀವರ ಕುರಿತು ಭರತವಂಶಜ ನೀನು
ಶೋಕಿಸುವುದು ತರವಲ್ಲ. (2-30)

ಇದೇ ಅಧ್ಯಾಯದಲ್ಲಿ ಬರುವ ಇನ್ನೊಂದು ಶ್ಲೋಕವನ್ನು ನೋಡೋಣ,

ಆಪೂರ್ಯಮಾಣಮಚಲಪ್ರತಿಷ್ಠಂ ಸಮುದ್ರಮಾಪಃ ಪ್ರವಿಶಂತಿ ಯದ್ವತ್
ತದ್ವತ್ಕಾಮಾ ಯಂ ಪ್ರವಿಶಂತಿ ಸರ್ವೇ ಸ ಶಾಂತಿಮಾಪ್ನೋತಿ ನ ಕಾಮಕಾಮೀ ॥(2-70)

ಸಾಗರಕೆ ನದಿ ಜಲವು ಹರಿದು ಬಂದರೂ ಉಬ್ಬದೆಯೆ
ಸ್ಥಿರವಾಗಿ ಇರುವಂತೆ ಜ್ಞಾನಿಯ ಮನವು
ಶಾಂತವಿರುವುದು ಬೋಗ ಭಾಗ್ಯಗಳು ಒದಗಿ ಬಂದರು ಕೂಡ
ಆಶೆಗಳ ದಾಸನಿಗೆ ಅದು ಕಷ್ಟಕರವು । (2-70)

ಆರನೆಯ ಅಧ್ಯಾಯ ಧ್ಯಾನಯೋಗ (ಆತ್ಮಸಂಯಮಯೋಗ) ಇದರಲ್ಲಿ ಬರುವ ಈ ಎರಡು ಶ್ಲೋಕಗಳನ್ನು ನೋಡೋಣ,

"ನಾತ್ಯಶ್ನತಸ್ತು ಯೋಗೋಽಸ್ತಿ ನಚೈಕಾಂತಮನಶ್ನತ:
ನಾ ಚಾತಿಸ್ವಪ್ನಶೀಲಸ್ಯ ಜಾಗ್ರತೋ ನೈವ ಚಾರ್ಜುನ ।"(6-16)

ಮಿತಿಮೀರಿ ಉಣ್ಣುವಗೆ ಯೋಗ ಸಿದ್ಧಿಸದು
ಯೋಗ ಸಿದ್ಧಿಸದು ಉಣ್ಣದೆ ಉಪವಾಸವಿರುವವಗೆ
ಮಿತಿಮೀರಿ ನಿದ್ರಿಸುವವಗೆ ಯೋಗ ಸಿದ್ಧಿಸದು
ಯೋಗ ಸಿದ್ಧಿಸದು ನಿದ್ರೆಯನು ಬಿಟ್ಟವಗೆ । (6-16)

"ಯುಕ್ತಾಹಾರ ವಿಹಾರಸ್ಯ ಯುಕ್ತ ಚೇಷ್ಟಸ್ಯ ಕರ್ಮಸು
ಯುಕ್ತಸ್ವಪ್ನಾವಬೋಧಸ್ಯ ಯೋಗೋ ಭವತಿ ದು:ಖಹಾ ।" (6-17)

ದೇಹ ನಿರ್ವಹಣೆಗೆಂಬಂತೆ ಮಿತ ಆಹಾರ ವಿಹಾರಗಳ ಮಾಡುತ್ತ
ಯುಕ್ತ ಕರ್ಮಗಳ ಮಾಡುವಗೆ
ಸಿದ್ಧಿಸುವುದು ಆ ಯೋಗ, ಸಿದ್ಧಿಸುವುದು ನಿದ್ರೆ ಎಚ್ಚರಗಳಲಿ
ಹಿತಮಿತಗಳನು ಅನುಸರಿಸುವವಗೆ । (6-17)

ಒಂಭತ್ತನೆಯ ಅಧ್ಯಾಯ ರಾಜವಿದ್ಯಾರಾಜಗುಹ್ಯಯೋಗ.
ಅದರಲ್ಲಿ ಬರುವ ಒಂದು ಶ್ಲೋಕ:
ಪತ್ರಂ ಪುಷ್ಪಂ ಫಲಂ ತೋಯಂ ಯೋ ಮೇ ಭಕ್ತ್ಯಾ ಪ್ರಯಚ್ಛತಿ
ತದಹಂ ಭಕ್ತ್ಯುಪಹೃತಮಶ್ನಾಮಿ ಪ್ರಯತಾತ್ಮನಃ" (9-27)

"ಎಲೆ ಹೂವು ಹಣ್ಣು ನೀರಾಯ್ತು ವಿರಕ್ತಿ ಭಕ್ತಿಗಳಿಂದ ಸಮರ್ಪಿಸಿದರೆ ಸಾಕಾಯ್ತು
ಅವುಗಳನು ಸ್ವೀಕರಿಸಿ ಭುಜಿಸಿ ಅನುಗ್ರಹಿಸುವೆನು ನಾನು । (9-26)

ಹನ್ನೆರಡನೆಯ ಅಧ್ಯಾಯ ಭಕ್ತಿ ಯೋಗ. ಅದರಲ್ಲಿ ಬರುವ ಒಂದು ಶ್ಲೋಕ ಹೀಗಿದೆ:

"ಯೋ ನ ಹೃಷ್ಯತಿ ನ ದ್ವೇಷ್ಟಿ ನ ಶೋಚತಿ ನ ಕಾಂಕ್ಷತಿ
ಶುಭಾಶುಭ ಪರಿತ್ಯಾಗೀ ಯೋಮದ್ಭಕ್ತಃ ಸಮೇ ಪ್ರಿಯಃ (12-16)

ಹಸನಾಯ್ತೆಂದು ಹರ್ಷಿಸದೆ ಕೆಡಕಾಯ್ತೆಂದು ಚಿಂತಿಸದೆ ಇದು ಸಿಗದೆಂದು
ದುಃಖಿಸದೆಅದು ಬೇಕೆಂದು ಬಯಸದೆ ಒಳಿತು ಕೆಡಕು ಇಷ್ಟಾನಿಷ್ಟಗಳಿಗೆ
ಚಿಂತಿಸದೆ ಇರುವ ಭಕ್ತ ನನಗೆ ಪ್ರಿಯನು । (12-16)

ಹದಿನೈದನೆಯ ಅಧ್ಯಾಯ ಪುರುಷೋತ್ತಮ ಯೋಗ. ಅದರಲ್ಲಿಯ ಮೊದಲ ಶ್ಲೋಕ ಇಲ್ಲಿದೆ:

ಊರ್ಧ್ವಮೂಲಮಧಃ ಶಾಖಾಮಶ್ವತ್ಥಂ ಪ್ರಾಹುರವ್ಯಯಮ್
ಛಂದಾಂಸಿ ಯಸ್ಯ ಪರ್ಣಾನಿ ಯಸ್ತಂ ವೇದ ಸ ವೇದವಿತ್ (15-1)

ಬೇರುಗಳ ಆಧಾರ ಮೇಲೆ ಟೊಂಗೆಗಳು ಕೆಳಗಿರುವ ಅಶ್ವತ್ಥ ಮರದಂತೆ
ಸಂಸಾರ ಬುಡ ಪರಬ್ರಹ್ಮ ಕೆಳಮುಖಿ ನೇತಾಡುವ ದೇವ-ಜೀವರು ರೆಂಬೆ
ಕೊಂಬೆಗಳು ಅನುಕ್ಷಣವೂ ಅಂತವರ ಹೊಂದಿದರೂ ಅಳಿಯದಂತಿಹುದು
ಅರಳುತಿಹ ಅರಳಿಯಂತಿಹುದು ವೇದವಾಕ್ಯಗಳು
ಅದರೆಲೆಗಳ್ಅಂತೆಂದರಿತವನು ವೇದ ಬಲ್ಲಿದನು (15-1)

ಹದಿನೆಂಟನೆಯ ಅಧ್ಯಾಯ ಮೋಕ್ಷಸನ್ಯಾಸಯೋಗ. ಅದರಲ್ಲಿ ಅರ್ಜುನನ ಎಲ್ಲ ಸಂಶಯಗಳಿಗೆ ಪರಿಹಾರ ದೊರೆಯುತ್ತದೆ. ಕೊನೆಗೆ ಅವನು ಹೇಳುತ್ತಾನೆ:

"ನಷ್ಟೋ ಮೋಹಃ ಸ್ಮೃತಿರ್ಲಬ್ಧಾ ತ್ವತ್ಪ್ರಸಾದಾನ್ಮಯಾಚ್ಯುತ ।
ಸ್ಥಿತೋಽಸ್ಮಿ ಗತಸಂದೇಹಃ ಕರಿಷ್ಯೇ ವಚನಂ ತವ ॥ (18-73)

ಮೋಹ ಕಳೆಯಿತು ಈ ಸಂದರ್ಭದಲಿ ಯುಧ ಸರಿಯೆಂಬ
ಸ್ಮೃತಿ ಬಂತು ಇದು ನನ್ನ ಮೇಲಣ ನಿನ್ನ ಅನುಗ್ರಹವು
ಅರಿವು ಬಂದಿತು ನನಗೆ ಅಚ್ಯುತನೆ ನನ್ನೆಲ್ಲ ಸಂದೇಹಗಳು
ಕಳೆದವು ನೀ ತಿಳಿಸಿರುವಂತೆ ಮಾಡೆ ಸಿದ್ಧ ನಾನು ॥ (18-73)

ಈ ಪುಸ್ತಕದ ಕಳಶಪ್ರಾಯವೆಂಬಂತೆ ಕೊನೆಯಲ್ಲಿ "ಅನುಬಂಧ" ಮೂಡಿಬಂದಿದೆ. ಇದೊಂದು ಬಹು ಉಪಯೋಗಿ ಭಾಗವಾಗಿದೆ. ಇದು ನಮ್ಮ ಜ್ಞಾನದ ಸೀಮೆಯನ್ನು ವಿಸ್ತರಿಸುತ್ತದೆ. ಮಹಾಭಾರತದಲ್ಲಿ ಬರುವ ಪಾತ್ರಗಳ ಹೆಸರನ್ನು ಅವುಗಳ ವೈಶಿಷ್ಟ್ಯವನ್ನು ಬಹಳ ಅರ್ಥಪೂರ್ಣವಾಗಿ ವಿವರಿಸಲಾಗಿದೆ. ಮೊದಲನೆಯದಾಗಿ ಭಗವದ್ಗೀತೆಯಲ್ಲಿ ಬರುವ ಶ್ರೀಕೃಷ್ಣನ ಹೆಸರುಗಳನ್ನು ಕೊಟ್ಟು ಅವುಗಳ ಅರ್ಥವನ್ನು ವಿವರಿಸಲಾಗಿದೆ. ಹೃಷಿಕೇಶ, ಮುಕುಂದ, ಅಚ್ಯುತ, ಗೋವಿಂದ, ಮಧುಸೂದನ, ಅರಿಸೂದನ, ಕೇಶೀನಿಶೂದನ, ಜನಾರ್ದನ, ಮಾಧವ, ಕೇಶವ, ಪುರುಷೋತ್ತಮ, ಅಪ್ರಮೇಯ, ಹರಿ, ಯೋಗೇಶ್ವರ ಇತ್ಯಾದಿಯಾದ ಹೆಸರುಗಳ ಅರ್ಥವನ್ನು ಬಹಳ ವಿವರಣಾತ್ಮಕವಾಗಿ ಸೊಗಸಾಗಿ ಹೇಳಲಾಗಿದೆ. ಉದಾಹರಣೆಯಾಗಿ 'ಅಪ್ರಮೇಯ' ಎಂಬುದು ಕೃಷ್ಣನ ಒಂದು ಹೆಸರು. ಇದರ ಅರ್ಥವನ್ನು ಹೀಗೆ ಹೇಳಲಾಗಿದೆ. "ಅಳತೆಗೆ ಮೀರಿದವನು, ಯಾವ ಅಳತೆಯ ಪರಿಧಿಗೂ ಸಿಗದವನು. ಬ್ರಹ್ಮಾಂಡವನ್ನು ಅಳೆಯಬಹುದಾದರೆ ಅದರ ಮೇಲೂ ಹತ್ತು ಅಂಗುಲ ಪರಿಧಿಯಲ್ಲಿ ಹಿರಿದಾದವನು. ಬ್ರಹ್ಮಾಂಡ ಪ್ರತಿ ಮಾನವನ ಸೆಕೆಂಡಿನಲ್ಲೂ ವಿಸ್ತಾರಗೊಳ್ಳುತ್ತದೆ ಎಂದು ವಿಜ್ಞಾನಿಗಳು ಹೇಳುತ್ತಾರೆ. ಆ ವಿಸ್ತಾರಕ್ಕೆ ಎಡೆಮಾಡಿಕೊಡುವಷ್ಟು ವೈಶಾಲ್ಯ ಪರಬ್ರಹ್ಮನದು" ಹೀಗೆ ನಮ್ಮ ಜ್ಞಾನ ವಿಕಾಸಗೊಳ್ಳುತ್ತಾ ಹೋಗುತ್ತದೆ. ಮುಂದೆ ಭಗವದ್ಗೀತೆಯಲ್ಲಿ ಬರುವ ಅರ್ಜುನನ ಹೆಸರನ್ನು ಕೊಡಲಾಗಿದೆ. ಅರ್ಜುನ, ಪಾರ್ಥ, ಹನುಮದ್ಧ್ವಜ, ಗುಡಾಕೇಶ, ಪರಂತಪ, ಮಹಾಬಾಹು, ಭರತಕುಲತಿಲಕ, ಭರತಸತ್ತಮ, ಕುರುಪ್ರವೀರ, ಕುರುಸತ್ತಮ, ಅನಘ ಮೊದಲಾದ ಹೆಸರುಗಳ ಅರ್ಥವನ್ನು ಸವಿವರವಾಗಿ ಕೊಡಲಾಗಿದೆ. ಮುಂದೆ ಮಿಕ್ಕ ಹೆಸರುಗಳು ಮತ್ತು ವಿಶೇಷ ಪದಗಳ ಅರ್ಥವನ್ನು ಕೊಡಲಾಗಿದೆ. ಧೃತರಾಷ್ಟ, ಸಂಜಯ, ವಸುಗಳು, ದ್ರುಪದಪುತ್ರ, ಸಾತ್ಯಕಿ, ಪುರಜಿತ್ತು, ಶೈಬ್ಯ, ಯುಧಾಮನ್ಯು, ಉತ್ತಮೌಸಜ, ಸೋಮದತ್ತ, ವಿಕರ್ಣ, ಭೂರಿಶ್ರವ, ವೃಕೋದರ, ಮರುತರು, ಸಿದ್ಧರು, ಮಹಾಭೂತತತ್ವಗಳು, ಶಬ್ದರಸಾದಿಗಳು ಮೊದಲಾದ ಪದಗಳ ಅರ್ಥವನ್ನು ಬಹಳ ಸೊಗಸಾಗಿ ವಿವರಿಸಲಾಗಿದೆ. ಇದು ನಮಗೆ ಗೊತ್ತಿಲ್ಲದ ಹಲವಾರು ವಿಷಯಗಳನ್ನು ಮನದಟ್ಟು ಮಾಡಿಕೊಡುವುದಲ್ಲದೇ ಇನ್ನೂ ತಿಳಿಯಬೇಕೆನ್ನುವ ನಮ್ಮ ಆಸಕ್ತಿಯನ್ನು ಇಮ್ಮಡಿಗೊಳಿಸುತ್ತದೆ. ಹೀಗೆ ಮಹಾಭಾರತದ ಬಗೆಗಿನ ನಮ್ಮ ಜ್ಞಾನವನ್ನು ವಿಸ್ತರಿಸುತ್ತಾ ಸಾಗುವ ಈ ಪುಸ್ತಕ ಬಹಳ ಅರ್ಥಪೂರ್ಣವಾಗಿದೆ.

ಈ ಭಾವಾನುವಾದದ ಇನ್ನೊಂದು ವೈಶಿಷ್ಟ್ಯವೆಂದರೆ ಇದರ ಸಮರ್ಪಣೆ. ಈ ಹೊತ್ತಿಗೆಯನ್ನು ಮೊಟ್ಟಮೊದಲನೆಯದಾಗಿ ಮುಂದಿನ ಪೀಳಿಗೆಯ ಆಧಾರಸ್ಥಂಭವಾದ ಇಂದಿನ ಮಕ್ಕಳಿಗಾಗಿ ಸಮರ್ಪಿಸಲಾಗಿದೆ. ಅಂತೆಯೇ ಮಕ್ಕಳಿಗೆ ಅರ್ಥವಾಗುವಂತೆ ಸರಳವಾಗಿ ಬರೆಯಲಾಗಿದೆ. ಜನಸಾಮಾನ್ಯರು ಮತ್ತು ಮಕ್ಕಳನ್ನು ಗಮನದಲ್ಲಿರಿಸಿಕೊಂಡಿರುವುದೇ ಈ ಭಾವಾನುವಾದದ ಹೆಗ್ಗಳಿಕೆಯಾಗಿದೆ. ಇಂತಹ ಸಾರ್ಥಕ ಉದ್ಧೇಶವನ್ನೊಳಗೊಂಡಿರುವ ಈ ಭಾವಾನುವಾದವು ಬಹಳ ವಿಶಿಷ್ಟವಾಗಿದೆ.

ಹೀಗೆ ಸಾಮಾನ್ಯಜನತೆ ಹಾಗೂ ಪುಟಾಣಿಗಳನ್ನು ಗಮನದಲ್ಲಿರಿಸಿಕೊಂಡಿರುವಂತೆ ಈ ಭಾವಾನುವಾದವು ಸರ್ವರಿಗೂ ಒಳಿತನ್ನು ಹಾರೈಸುತ್ತದೆ. 'ಸುಖಿಗಳಾಗಿರಲಿ ಭುವನದಲ್ಲೆಲ್ಲ ಜೀವಿಗಳು । ಆರೋಗ್ಯದಿಂದ ಕೂಡಿರಲಿ ಎಲ್ಲ । ಒಳ್ಳೆಯದನೆ ಕಾಣುವಂತಿರಲಿ ಎಲ್ಲ । ದು:ಖಪೀಡಿತರಾಗದಿರಲಿ ಯಾರೂ' ಎನ್ನುವ ಒಳ್ಳೆಯ ಆಶಯದಿಂದ ಕೂಡಿರುವ ಈ ಪುಸ್ತಕ ಎಲ್ಲರೂ ಓದಲೇಬೇಕಾದ ಎಲ್ಲರ ಮನೆಯಲ್ಲೂ ಇರಲು ಯೋಗ್ಯವಾದ ಒಂದು ಒಳ್ಳೆಯ ಪುಸ್ತಕವಾಗಿದೆ.

ಗೀತೆಯನ್ನು ಅನುವಾದಿಸಿ ಓದಲು ಒದಗಿಸಿದರೆ ಸಾಲದು, ಹೊರನಾಡ ಕನ್ನಡಿಗರಲ್ಲಿ ಅನೇಕ ಮಕ್ಕಳ ಮಾತೃಭಾಷೆ ಕನ್ನಡವಾಗಿದ್ದರೂ ಅವರಿಗೆ ಓದಲು ಬರುವುದಿಲ್ಲ. ಕೆಲವರು ದೃಷ್ಟಿಹೀನರು, ದೃಷ್ಟಿಮಾಂದ್ಯ ಮಕ್ಕಳೂ ಇದ್ದಾರೆ. ಓದಲು ಬಿಡುವಿಲ್ಲದವರಿಗೂ ಗೀತೆಯ ಪಠಣವಾಗಬೇಕೆಂಬ ಸದುದ್ದೇಶದಿಂದ ಧ್ವನಿಪುಸ್ತಕವನ್ನು (ಎಮ್.ಪಿ-3ಯಲ್ಲಿ 5 ಗಂಟೆ 30 ನಿಮಿಷ) ಶ್ರವಣಸುಖಕ್ಕಾಗಿ ಹೊರತಂದಿದ್ದಾರೆ. ಡಾ। ಪಂಡಿತ ನಾಗರಾಜ ಹವಾಲ್ದಾರ್ ಹಾಗೂ ಓಂಕಾರ್ ಅವರು ತಮ್ಮ ಮಧುರ ಕಂಠದಿಂದ ಇದನ್ನು ನಾಟಕೀಯ ಶೈಲಿಯಲ್ಲಿ ಪ್ರಸ್ತುತ ಪಡಿಸಿದ್ದಾರೆ.

- ಶ್ರೀಮತಿ ಸುರೇಖಾ ಆರ್. ನಾಯ್ಕ್
(ಸಂಪರ್ಕ: 9987769458)


## FORTHCOMING PROGRAMMES

| Date | Day | Timing | Programmes |
|---|---|---|---|
| 15th & 17.08.2014 | Friday & Sunday | 11.00 a.m to 8.00 p.m. | Theatre Workshop (only for Association Members) Conducted By Dr.B.R. Manjunath |
| 28.08.2014 | Thursday | 10.00 a.m | Shree Swarna Gowri Pratishthapana & Pooja |
| | | 8.00 p.m. | Pooja & Mangalarati |
| 29.08.2014 | Friday | 9.00 a.m. | Shree Mahaganapathi Pratishthapana Pooja |
| | | 8.00 p.m. | Pooja & Mangalarati |
| 30.08.2014 | Saturday | 5.00 p.m. | Arashina Kumkum for Ladies |
| | | 7.00 p.m. | Karnatic Vocal |
| | | 8.00 p.m. | Pooja & Mangalarati |
| 31.08.2014 | Sunday | 9.00 a.m. | Pooja & Mangalarati |
| | | 12.00 noon | Procession of Shri Swarna Gauri & Shree Ganapathi to Dadar Beach for Immersion and Prasada Viniyoga |
| 20.09.2014 | Saturday | 7.00 p.m. | A Lecture (English & Kannada Language) on "Architectural beauty of Vijayanagara Kingdom" by Smt. Vasundhara Philiosette |

## ಮನದಾಸೆ

ನನ್ನ ಮನದ ಮಾತೇ ನನಗೆ ತಿಳಿಯುತ್ತಿಲ್ಲವಲ್ಲ
ನಿನ್ನ ಮನದ ಮಾತನರಿಯುವುದು ಕನಸಿನಗಂಟು
ಮನದಾಸೆಗಳು ನೂರೆಂಟು ಆವರಿಸಿ ಪೀಡಿಸುವಾಗ
ನಿನ್ನ ಮನದಾಸೆಗಳ ನಾ ಹೇಗೆ ತಿಳಿಯಬಲ್ಲೆನು?
ತಂಡು ಬಟ್ಟೆಯನುಟ್ಟು ತಪಸು ಮಾಡುವವಗೂ
ನಿಲುಕದಿದೆ ಅವನಾಳದ ಮಾತು ಎನ್ನುವರು
ನಮ್ಮ ಮನಸಿ ಕನಸು ಹೆಗರಿಯುವವನು?

ಉಪವಾಸ ವೃತ ಮಾಡಿ ದೇವರನರಿಯಲು ಮನದಿ
ನಾವಿಲ್ಲಿ ಪಡುತಿರುವ ತೊರೆಯ ನೋಡಿಯೂ ಅವ
ಸರ ಹಿಡಿದು ರುದ್ರಾಕ್ಷಿ
ಜಪತಪವ ಮಾಡಿದರೂ
ಒಲಿಯಲಿಲ್ಲವಲ್ಲಾ ಅವನು ನಮ್ಮೆಲ್ಲರ ಮನಕೆ
ಏನೆಂದು ಹೇಳಿ ನನ್ನ ಮನದಳಲ?
ನನ್ನ ಮನಮರ್ಕಟವು ಓಡೋಡಿ ಬಂದೆನಗೆ
ಕೊಡುವ ಬಾಧೆಯ ಕೊನೆಗೂ ನಿಲ್ಲದೇನು?



- *ಡಾ. ಜಿ.ಡಿ. ಜೋಶಿ*

## ಡಾ. ಸಂಜೀವ ಶೆಟ್ಟಿಯವರ ನೆನಪಲ್ಲಿ..



– ಶ್ರೀಮತಿ ಅರ್ಚನಾ ರಮೇಶ್

ಓ ನಯನವೇ ನೀ ಯಾರ ಹುಡುಕುವೆ...
ಬಚ್ಚಿಟ್ಟು ಮನದಲ್ಲಿ ನಿತ್ಯ ಜಪಿಸುವೆ..
ದೇವರ ನಾಮದಂತೆ ಮಂತ್ರವ ಪಠಿಸುವೆ..
ಆದರೂ, ಓ ನಯನವೇ ನೀ ಯಾರ ಹುಡುಕುವೆ.

ತಿಳಿದಿದ್ದರೂ ನಿನಗೆ ಬರಲಾರರು ಎಂದು..
ಆದರೂ ಯಾಕೆ ಈ ತರ ಕಾತರಿಸುವೆ..
ಎದೆಗೂಡಲ್ಲಿ ಜೋಪಾನ ಮಾಡಿ ಕೂರಿಸಿರುವೆ..
ಓ ನಯನವೇ ನೀ ಯಾರ ಹುಡುಕುವೆ..

ಸಿಗಲಾರದು ನಿನಗೆ ಪ್ರೀತಿ, ಮಮತೆ, ವಾತ್ಸಲ್ಯ
ಗೊತ್ತಿದ್ದೂ ಗೊತ್ತಿದ್ದೂ ಯಾಕೆ ಹಂಬಲಿಸುವೆ..
ಉಸಿರಾಡುವ ಪ್ರತಿಕ್ಷಣವೂ ನೆನಪಿಸುವೆ..
ಓ ನಯನವೇ ನೀ ಯಾರ ಹುಡುಕುವೆ..

ಸಿಕ್ಕಿ ಬಿದ್ದಾಗ ಗೊಂದಲದಲ್ಲಿ ನೀನು
ಪ್ರಶ್ನಿಸಲೆಂದು ನೀ ಯಾಕೆ ಆತುರಪಡುವೆ.
ಎದೆಬಡಿತದಲ್ಲಿ ಅದ್ಯಾರನ್ನು ಕೂರಿಸಿರುವೆ..
ಓ ನಯನವೇ ನೀ ಯಾರ ಹುಡುಕುವೆ..

ವಿಧಿಯ ಕ್ರೂರ ಲೀಲೆಗೆ ಬಳಲಿ ಬೆಂಡಾಗಿ
ಕೊನೆಗೊಂದು ದಿನ ಸೋತು ನೀ ಬಲಿಯಾಗಿರುವೆ..
ಚಿತ್ತದಿ ನೆನೆನೆನೆದು ಸೋತು ನೀ ಬಲಿಯಾಗಿರುವೆ..
ಓ ನಯನವೇ ನೀ ಯಾರ ಹುಡುಕುವೆ..

ಸಾಧ್ಯವಾದ ರೀತಿಯಲ್ಲಿ ಕಾಡಿ ಬೇಡಿ ನೋಡಿ
ವಿಶ್ವಾತ್ಮನೂ ಅಸಹಾಯನೆಂದು ನೀ ತಿಳಿದಿರುವೆ
ತನ್ನ ಪ್ರಾಣ ಒತ್ತೆಯಿಡಲು ಬಯಸಿರುವೆ..
ಓ ನಯನವೇ ನೀ ಯಾರ ಹುಡುಕುವೆ..

ಆ ಪರಮಾತ್ಮನು ನಿನ್ನುಸಿರನ್ನು ತಿರಸ್ಕರಿಸಿ..
ನಿನ್ನ ದೇವರ ಉಸಿರನ್ನು ಪಡೆದಾಗ ಮುನಿಸಿರುವೆ..
ಜಗದೀಶನಲ್ಲಿ ಅದೆಷ್ಟೋ ಸಲ ಜಗಳ ಕಾದಿರುವೆ..
ಓ ನಯನವೇ ನೀ ಯಾರ ಹುಡುಕುವೆ..

ಹಿಂತಿರುಗಿ ಬರಲಿ.. ಯಾವತ್ತಾದರೂ ಅವರು
ಎಂದು ಪುಣ್ಯಚೇತನದ ಬರುವಿಕೆಗೆ ಕಾದಿರುವೆ
ಓಂ ಶ್ರೀ ಶೆಟ್ಟಿ ಸರ್ ಆಯ ನಮಃ ಎಂಬ ಮಂತ್ರವ
ಓ ನಯನವೇ ನೀ ಯಾರ ಹುಡುಕುವೆ..

ಓ ನಯನವೇ ನೀ ಯಾರ ಹುಡುಕುವೆ..
ನಿನ್ನನ್ನಗಲಿ ವರುಷ ಒಂದಾದರೂ ಈಗ
ಅವರಾತ್ಮ ನಿನ್ನೊಂದಿಗಿರುವಂತೆ ಅನುಭವಿಸಿರುವೆ...
ಅಭಯಹಸ್ತ ನೀಡಿರುವ ದಿವ್ಯಚೇತನಕ್ಕೆ ಮನಸಾ ವಂದಿಸಿರುವೆ

Date of Publication : 10th of every month RNI No. 040015 / 83
MH / MR / North East / 093 / 2012- 2014 Date of Posting : 10th of every month at Mumbai Patrika Channel Sorting Office G.P.O.

## ಶ್ರೀ ಸ್ವರ್ಣ ಗೌರಿ ಹಾಗೂ ಶ್ರೀ ಮಹಾಗಣಪತಿ ಮಹೋತ್ಸವ - ೨೦೧೪



ಸ್ವಸ್ತಿ ಶ್ರೀ ವಿಜಯಾಭ್ಯುದಯ ಶಾಲಿವಾಹನ ಶಕೆ ೧೯೩೬ರ ಶ್ರೀ ಜಯ ನಾಮ ಸಂವತ್ಸರದ ಭಾದ್ರಪದ ಶುದ್ಧ ತೃತೀಯ **ಗುರುವಾರ ೨೮.೦೮.೨೦೧೪ ರಂದು ಶ್ರೀ ಸ್ವರ್ಣ ಗೌರಿಯನ್ನು ಮತ್ತು ಚತುರ್ಥಿ ಶುಕ್ರವಾರ ೨೯.೦೮.೨೦೧೪ ರಂದು ಶ್ರೀ ಮಹಾಗಣಪತಿಯನ್ನೂ ಆವಾಹಿಸಿ, ಷಷ್ಠಿ ಭಾನುವಾರ ದಿನಾಂಕ ೩೧.೦೮.೨೦೧೪** ರವರೆಗೆ ಉತ್ಸವವನ್ನು ಅಸೋಸಿಯೇಶನ್ನಿನ ಆಶ್ರಯದಲ್ಲಿ ಎಂದಿನಂತೆ ವಿಜೃಂಭಣೆಯಿಂದ ಆಚರಿಸಲು ನಿಶ್ಚಯಿಸಲಾಗಿದೆ. ದಿನಾಂಕ ೩೧.೦೮.೨೦೧೪ನೇ ಭಾನುವಾರ ಬೆಳಿಗ್ಗೆ ಸಕಲ ಪೂಜಾದಿ ಸೇವೆಗಳನ್ನು ಸಲ್ಲಿಸಿ, ಮಹಾಮಂಗಳಾರತಿ ಮಾಡಿ ಮೆರವಣಿಗೆಯ ನಂತರ ಗೌರಿ ಗಣಪತಿಯನ್ನು ದಾದರ್ ಸಮುದ್ರ ತೀರದಲ್ಲಿ ವಿಸರ್ಜಿಸಲಾಗುವುದು. ತಾವುಗಳೆಲ್ಲರೂ ಈ ಮಹೋತ್ಸವದಲ್ಲಿ ಭಾಗವಹಿಸಿ, ಉದಾರ ಸಹಾಯ ಮಾಡಿ ಭಗವತ್ಕೃಪೆಗೆ ಪಾತ್ರರಾಗಬೇಕೆಂದು ಕೋರುತ್ತೇವೆ. ಸೇವಾರ್ಥ ಕೊಡಲಿಚ್ಛಿಸುವವರು ತಮ್ಮ ಹೆಸರು, ಜನ್ಮ ನಕ್ಷತ್ರ, ಗೋತ್ರ, ಪೂಜೆ ನೆರವೇರಿಸಬೇಕಾದ ದಿನಾಂಕ ಬರೆದು ನಮ್ಮ ವಿಳಾಸಕ್ಕೆ ದಿನಾಂಕ ೨೮.೦೮.೨೦೧೪ ರೊಳಗೆ ತಲುಪಿಸಿರಿ ಅಥವಾ email ಮಾಡಿ.

**ಅಧ್ಯಕ್ಷರು ಹಾಗೂ ಸಮಿತಿ ಸದಸ್ಯರು**

ವಿ.ಸೂ.

೧. ಸೇವಾರ್ಥ ನಡೆಸಲಿಚ್ಛಿಸುವವರು ೨೫೧/- ರೂ.ಗಳ ಅಥವಾ ಹೆಚ್ಚಿನ ಕಾಣಿಕೆಯನ್ನು (ನಗದು/ಚೆಕ್) ಅಂಚೆ ಮೂಲಕ ಕಳುಹಿಸಬಹುದು ಅಥವಾ ಸ್ವತಃ ಅಸೋಸಿಯೇಶನ್ನಿನ ಕಛೇರಿಗೆ ಬಂದು ನೀಡಬಹುದು.

೨. ಗೌರಿ ಪೂಜೆಯಲ್ಲಿ ಭಾಗವಹಿಸಲು ಬಯಸುವ ಮಹಿಳೆಯರು ತಮ್ಮ ಹೆಸರನ್ನು ದಿನಾಂಕ ೨೬.೦೮.೨೦೧೪ರೊಳಗೆ ಕಾರ್ಯದರ್ಶಿಗಳಿಗೆ ತಿಳಿಸಬೇಕೆಂದು ಕೋರಿಕೆ.

೩. ಪೂಜೆ ಕಾರ್ಯಕ್ರಮದ ಅಂಗವಾಗಿ ನಡೆಸುವ ಪ್ರತಿ ಸಂಜೆಯ ಸಾಂಸ್ಕೃತಿಕ ಕಾರ್ಯಕ್ರಮವನ್ನು ನಡೆಸಿಕೊಡಲಿಚ್ಛಿಸುವ ಸದಸ್ಯರು ರೂ. ೨೫೦೦/- ವನ್ನು ದೇಣಿಗೆಯಾಗಿ ಕೊಡಬೇಕೆಂದು ವಿನಂತಿ.

### 62nd Year of Shri Swarna Gauri and Shri Mahaganapathi Pooja

In keeping with its glorious tradition, your Association is conducting **Shri Swarna Gauri and Shri Mahaganapathi Pooja** this year also, with all pomp and gaiety from **28th August 2014 to 31st August 2014.** This event will be marked by the traditional pooja every morning and cultural programmes followed by traditional pooja in the evenings. The Visarjana will be on **31st August 2014.** A detailed programme will be mailed to you in due course. Those desirous of giving "Sevartha" Rs. 251/- or more may please send their cheque to the Mysore Association office, stating the preferred date for pooja along with your name, gotra and nakshatra.

*ಸ್ವಾತಂತ್ರ್ಯೋತ್ಸವದ ಶುಭಾಶಯಗಳು*

**ತಾ. 15-8-2014 ಶುಕ್ರವಾರ**

**ಅಸೋಸಿಯೇಷನ್‌ನಲ್ಲಿ
ಬೆಳಿಗ್ಗೆ 10.00ಕ್ಕೆ ಸರಿಯಾಗಿ ಧ್ವಜಾರೋಹಣ
ಸಮಾರಂಭ ಜರಗಲಿದೆ.**

*ಎಲ್ಲರಿಗೂ ಹಾರ್ದಿಕ ಸ್ವಾಗತ*

## ಆತ್ಮಕಥನಗಳು ಮುಂದಿನ ಜನಾಂಗಕ್ಕೆ ಮಾರ್ಗದರ್ಶಕ ರೂಪದಲ್ಲಿರಲಿ - ಡಾ. ಭರತ್‌ಕುಮಾರ್ ಪೊಲಿಪು



ಮುಂದಿನ ಜನಾಂಗಕ್ಕೆ ಮಾರ್ಗದರ್ಶಕ ಆಗುವಂತಹ ರೀತಿಯಲ್ಲಿ ಆತ್ಮ ಕಥನಗಳು ಮೂಡಿ ಬರಬೇಕು. ಆತ್ಮಕತೆಗಳು ಸಾಮಾಜಿಕ ಎಚ್ಚರಗಳ ರೂಪದಲ್ಲಿ ಹೊರಬರಬೇಕು. ಅದು ಸಾಹಿತ್ಯ ಕೃತಿಯಾಗಿರಬೇಕು ಎಂದು ಹೆಸರಾಂತ ರಂಗ ನಿರ್ದೇಶಕ, ವಿಮರ್ಶಕ ಡಾ. ಭರತ್‌ಕುಮಾರ್ ಪೊಲಿಪು ಅವರು ನುಡಿದರು.

ಸುವರ್ಣ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಕರ್ನಾಟಕ ಸಂಘ, ಮುಂಬಯಿ ಮತ್ತು ಸೃಜನಾ-ಮುಂಬಯಿ ಕನ್ನಡ ಲೇಖಕಿಯರ ಬಳಗದ ದಶಮಾನೋತ್ಸವ ಪ್ರಯುಕ್ತ ಜಂಟಿ ಆಶ್ರಯದಲ್ಲಿ ಜೂ.28 ರಂದು ಸಮರಸ ಭವನದಲ್ಲಿ ಸಂಜೆ ಜರಗಿದ 'ಹಚ್ಚಿಟ್ಟ ಹಣತೆಗಳು' ಅನುಭವ ಕಥನ ಕೃತಿ ಬಿಡುಗಡೆ ಸಂದರ್ಭದಲ್ಲಿ ಡಾ. ಭರತ್ ಕುಮಾರ್ ಪೊಲಿಪು ಅವರು ಕೃತಿ ಪರಿಚಯ ಮಾಡುತ್ತಾ ಹೀಗೆ ಅಭಿಪ್ರಾಯ ಪಟ್ಟರು.

'ಹಚ್ಚಿಟ್ಟ ಹಣತೆಗಳು' 33 ಲೇಖಕಿಯರ ಅನುಭವ ಕಥನಗಳು. ಆದರೆ, ಇವೆಲ್ಲವೂ ಆಯಾಯ ಲೇಖಕಿಯರ ಸಂಕ್ಷಿಪ್ತ ರೂಪದ ಆತ್ಮ ಕಥನಗಳೇ ಆಗಿವೆ ಎಂದ ಡಾ. ಭರತ್ ಕುಮಾರ್, ಆತ್ಮ ಕಥನಗಳು ಯಾಕೆ ಬೇಕು? ಇವುಗಳಲ್ಲಿ ಸತ್ಯ ಎಷ್ಟಿವೆ? ಎಂಬಿತ್ಯಾದಿ ವಿಷಯಗಳನ್ನು ತಿಳಿಸುತ್ತಾ ಆತ್ಮ ಕತೆಗಳು ಸಾಹಿತ್ಯ ಕೃತಿ ಆಗಬೇಕೇ ಹೊರತು ಅನುಭವಗಳ ವರದಿ ಆಗದಂತೆ ಜಾಗ್ರತೆ ವಹಿಸಬೇಕು ಎಂದರು.

'ಹಚ್ಚಿಟ್ಟ ಹಣತೆಗಳು' ಕೃತಿಯನ್ನು ಬಿಡುಗಡೆ ಮಾಡಿದ ಹೆಸರಾಂತ ಕವಯಿತ್ರಿ, ಅಂಕಣಗಾರ್ತಿ, ಇಂಗ್ಲಿಷ್ ಉಪನ್ಯಾಸಕಿ ದೀಪಾ ಹಿರೇಗುತ್ತಿ ಅವರು ಮುಂಬಯಿಯ ಲೇಖಕಿಯರು ಇಂತಹ ಒಂದು ಕೃತಿಯನ್ನು ಹೊರ ತಂದಿರುವುದನ್ನು ಶ್ಲಾಘಿಸುತ್ತಾ ಮರಾಠಿ ಅನುಭವ ಕಥನಗಳನ್ನು ಈ ಸಂದರ್ಭದಲ್ಲಿ ನೆನಪಿಸಿದರು. ಇಂದು ಕನ್ನಡ ಸಾಹಿತ್ಯದಲ್ಲೂ ಆತ್ಮಕಥನಗಳು ಬರಲು ಆರಂಭವಾಗಿದೆ. ನಮ್ಮ ಕರ್ನಾಟಕದ ಲೇಖಕಿಯರು ಆತ್ಮ ಕಥನಗಳಲ್ಲಿ ತಮ್ಮ ಬದುಕಿನ ಕಷ್ಟಗಳಿಗೆ ಯಾರನ್ನೂ ಹೊಣೆಗಾರರನ್ನಾಗಿ ಮಾಡುವುದಿಲ್ಲ ಎಂಬುದನ್ನೂ ಅವರು ಗಮನಿಸಿದರು.

ಸೃಜನಾ ಬಳಗದ ಸಹ ಸಂಚಾಲಕಿ ದಾಕ್ಷಾಯಿಣಿ ಯಡಹಳ್ಳಿ 'ಸೃಜನಾ' ನಡೆದು ಬಂದ ಹಾದಿಯನ್ನು ತೆರೆದಿಟ್ಟರು. ಮಾಲತಿ ಚಂದ್ರಕಾಂತ್ ಮತ್ತು ಲಲಿತಾ ಅಂಗಡಿ ವೇದಿಕೆಯ ಗಣ್ಯರನ್ನು ಪರಿಚಯಿಸಿದರು. ಕಾರ್ಯಕ್ರಮವನ್ನು ಕರ್ನಾಟಕ ಸಂಘ, ಮುಂಬಯಿ ಇದರ ಗೌ. ಕಾರ್ಯದರ್ಶಿ, ಕತೆಗಾರ ಓಂದಾಸ್ ಕಣ್ಣಂಗಾರ್ ನಿರೂಪಿಸಿ ವಂದಿಸಿದರು.

ಡಾ. ಸುಮಾ ದ್ವಾರಕನಾಥ್, ಶ್ಯಾಮಲಾ ಮಾಧವ, ಡಾ. ಸುನೀತಾ ಎಂ. ಶೆಟ್ಟಿ ಈ ಕೃತಿಯ ಸಂಪಾದಕರಾಗಿದ್ದಾರೆ.

Edited, Printed & Published by Mrs. Girija Shastry, On behalf of the Mysore Association, Mumbai. Tel.: 2402 4647 • Fax : 2401 0574
Email : mysoreassociation.mumbai@gmail.com
Printed at Aarati Art Printers, Fort, Mumbai - 400 001. * 2266 3361 / 2266 5938